ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಡಾ. ಹೆಚ್.ಬಿ. ಪ್ರಭಾಕರ ಶಾಸ್ತ್ರಿ

ಶ್ರೀಮತಿ ಸುಷ್ಮಾರಾಣಿ -ವಿರುದ್ಧ-ಶ್ರೀ ಹೆಚ್.ಎನ್. ನಾಗರಾಜ ರಾವ್

ಅಪರಾಧ ಪುನ್ರೀಕ್ಷಣ ಅರ್ಜಿ ಸಂಖ್ಯೆ: 152/2014 ಇದರೊಂದಿಗೆ ಇತರೆ ದಿನಾಂಕ: 1 ನೇ ಅಕ್ಟೋಬರ್ 2020

ಆಜ್ಞೆ

ನ್ಯಾಯಮೂರ್ತಿ ಡಾ. ಹೆಚ್.ಬಿ. ಪ್ರಭಾಕರ ಶಾಸ್ತ್ರಿ:

ಅಪರಾಧ ಪುನರೀಕ್ಷಣಾ ಅರ್ಜಿಸಂಖ್ಯೆ: 1358/2010 ರಲ್ಲಿನ ಪುನರೀಕ್ಷಣಾ ಅರ್ಜಿದಾರರು ಇದರಲ್ಲಿನ ಪ್ರತಿವಾದಿಯ ಪತಿಯಾಗಿದ್ದು, ಆ ಪ್ರತಿವಾದಿಯು ಅಪರಾಧ ಪುನರೀಕ್ಷಣಾ ಅರ್ಜಿಸಂಖ್ಯೆ: 152/2014 ರಲ್ಲಿ ಪುನರೀಕ್ಷಣಾ ಅರ್ಜಿದಾರರಾಗಿದ್ದಾರೆ.ಅಪರಾಧ ಪುನರೀಕ್ಷಣಾ ಅರ್ಜಿಸಂಖ್ಯೆ: 1358/2010 ರಲ್ಲಿ ಪುನರೀಕ್ಷಣಾ ಅರ್ಜಿದಾರರು ಅಪರಾಧ ಪುನರೀಕ್ಷಣಾ ಅರ್ಜಿಸಂಖ್ಯೆ: 152/2014 ರಲ್ಲಿ ಏಕೈಕ ಪ್ರತಿವಾದಿಯಾಗಿದ್ದಾರೆ.

ಅರ್ಜಿದಾರ ಪತಿ-ಶ್ರೀ ನಾಗರಾಜ ರಾವ್ರವರು VI ನೇ ಹೆಚ್ಚುವರಿ ಮುಖ್ಯ ಮಹಾನಗರ ದಂಡಾಧಿಕಾರಿ, ಬೆಂಗಳೂರು ನಗರ, ಈ ನ್ಯಾಯಾಲಯದಲ್ಲಿ (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತತೆಗಾಗಿ, " ಅಧಿವಿಚಾರಣಾ ನ್ಯಾಯಾಲಯ " ಎಂದು ಉಲ್ಲೇಖಿಸಲಾಗಿದೆ) ಆಪಾದಿತರ (ಆತನ ಪತ್ನಿ) ಶ್ರೀಮತಿ ಸುಷ್ಮಾರಾಣಿಯ ವಿರುದ್ಧ ಭಾರತ ದಂಡ ಸಂಹಿತೆ 1860 ರ (ಸಂಕ್ಷಿಪ್ತತೆಗಾಗಿ, ಇನ್ನು ಮುಂದೆ " ಐ.ಪಿ.ಸಿ. ಎಂದು ಉಲ್ಲೇಖಿಸಲಾಗಿದೆ) 500, 191 ಮತ್ತು 193 ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯವಾದ ಅಪರಾಧಕ್ಕಾಗಿ ಅಪರಾಧ ಮೊಕದ್ದಮೆ ಸಿ.ಸಿ.ಸಂಖ್ಯೆ:11445/2006 ನ್ನು ದಾಖಲಿಸಿದ್ದಾರೆ.

ಸದರಿ ಅಪರಾಧ ಮೊಕದ್ದಮೆಯು, ವಿಚಾರಣೆಯ ನಂತರ, ಭಾರತ ದಂಡ ಸಂಹಿತೆಯ 500 ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧಕ್ಕಾಗಿ ಅದರಲ್ಲಿನ ಆಪಾದಿತರಿಗೆ ಶಿಕ್ಷೆಯನ್ನು ನೀಡುವಲ್ಲಿ ಪರ್ಯವಸಾನಗೊಂಡಿತು ಹಾಗೂದಿನಾಂಕ: 25-10-2010ರಂದು ಅಧಿವಿಚಾರಣಾ ನ್ಯಾಯಾಲಯದ ತೀರ್ಪು ಹಾಗೂ ಆದೇಶದ ಮೂಲಕ ಆಪಾದಿತರಿಗೆ ಒಂದು ತಿಂಗಳ ಸಾದಾ ಸೆರೆವಾಸ ಹಾಗೂ 5,000/-ರೂಪಾಯಿಗಳ ದಂಡ ವಿಧಿಸಲಾಯಿತು.

ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಅಪರಾಧ ನಿರ್ಣಯದ ಸದರಿ ತೀರ್ಪು ಹಾಗೂ ಶಿಕ್ಷೆಯ ಆದೇಶವನ್ನು ಪ್ರಶ್ನಿಸಿ ಇದರಲ್ಲಿನ ಆಪಾದಿತರು (ಶ್ರೀಮತಿ ಸುಷ್ಮಾರಾಣಿ-ಪತ್ನಿ) ಹೆಚ್ಚುವರಿ ಸತ್ರ ನ್ಯಾಯಾಧೀಶರು, ತ್ವರಿತ ನ್ಯಾಯಾಲಯ XIV ಸಿಸಿಸಿ, ಬೆಂಗಳೂರು ನಗರ, ಈ ನ್ಯಾಯಾಲಯದಲ್ಲಿ ಇನ್ನು ಮುಂದೆ ಸಂಕ್ಷಿಪ್ತತೆಗಾಗಿ ' ಸತ್ರ ನ್ಯಾಯಾಧೀಶರ ನ್ಯಾಯಾಲಯ ' ಎಂದು ಉಲ್ಲೇಖಿಸಲಾಗಿದೆ) ಅಪರಾಧ ಅಪೀಲುಸಂಖ್ಯೆ: 815/2010 ರಲ್ಲಿ ಕ್ರಿಮಿನಲ್ ಅಪೀಲು ಸಲ್ಲಿಸಿದರು.ಆ ಅಪೀಲನ್ನು ವಿರೋಧಿಸಿದ ನಂತರ,ದಿನಾಂಕ: 15-02-2012ರ ತೀರ್ಪಿನ ಮೂಲಕ ವಜಾ ಮಾಡಲಾಯಿತು.ಮಾನ್ಯ ಸತ್ರ ನ್ಯಾಯಾಧೀಶರ ನ್ಯಾಯಾಲಯದಿಂದ ಹೊರಡಿಸಲಾದ ಅಪರಾಧ ನಿರ್ಣಯದ ಸ್ಥಿರೀಕರಣದ ಸದರಿ ತೀರ್ಪಿನ ವಿರುದ್ಧ ಆಪಾದಿತರು ಅಪರಾಧ ಪುನರೀಕ್ಷಣಾ ಅರ್ಜಿಸಂಖ್ಯೆ: 152/2014 ನ್ನು ಸಲ್ಲಿಸಿದರು ಹಾಗೂ ಅಧಿವಿಚಾರಣಾ ನ್ಯಾಯಾಲಯವು ಆದೇಶಿಸಿದ್ದ ಶಿಕ್ಷೆಯನ್ನು ಹೆಚ್ಚಿಸುವಂತೆ ಕೋರಿ ದೂರುದಾರ (ಪತಿ) ಈ ನ್ಯಾಯಾಲಯದ ಮುಂದೆ ಅಪರಾಧ ಪುನರೀಕ್ಷಣಾ ಅರ್ಜಿಸಂಖ್ಯೆ: 1358/2010 ನ್ನು ಸಲ್ಲಿಸಿದರು.

2. ಅನುಕೂಲತೆಯ ದೃಷ್ಟಿಯಿಂದ ಇನ್ನು ಮುಂದೆ ಪಕ್ಷಕಾರರನ್ನು, ಅವರು ಅಧಿ ವಿಚಾರಣಾ ನ್ಯಾಯಾಲಯದಲ್ಲಿ ಹೊಂದಿದ್ದ ದರ್ಜೆಗನುಗುಣವಾಗಿ ಉಲ್ಲೇಖಿಸಲಾಗಿದೆ.

3. ಈ ಎರಡೂ ಅಪರಾಧ ಪುನರೀಕ್ಷಣಾ ಅರ್ಜಿಗಳನ್ನು ಪರಸ್ಪರ ಸಂಬಂಧಿಸಿದ ವಿಷಯಗಳೆಂದು ಪರಿಗಣಿಸಲಾಗಿದೆ.ಹಾಗಾಗಿ ಸುನಾವಣೆ ಹಾಗೂ ಎಲೆಗಾಗಿ ಅವುಗಳನ್ನು ಒಟ್ಟಾಗಿ ತೆಗೆದುಕೊಳ್ಳಲಾಗಿದೆ.

4. ಸಂಬಂಧಿಸಿದ ಮನರೀಕ್ಷಣಾ ಅರ್ಜಿಯಲ್ಲಿ ಪ್ರತಿವಾದಿಯಾಗಿರುವ ಅಪರಾಧ ಪುನರೀಕ್ಷಣಾ ಅರ್ಜಿಸಂಖ್ಯೆ: 152/2014 ರ ಪುನರೀಕ್ಷಣಾ ಅರ್ಜಿದಾರರು ತಮ್ಮ ವಕೀಲರ ಮೂಲಕ ಪ್ರತಿನಿಧಿಸಲ್ಪಟ್ಟಿದ್ದಾರೆ.ಅಪರಾಧ ಪುನರೀಕ್ಷಣಾ ಅರ್ಜಿಸಂಖ್ಯೆ: 152/2014 ರಲ್ಲಿನ ಪ್ರತಿವಾದಿಯು ಮೂಲತಃ ತಮ್ಮ ಆಯ್ಕೆಯ ವಕೀಲರ ಮೂಲಕ ಪ್ರತಿನಿಧಿಸಲ್ಪಟ್ಟಿದ್ದರೂ ಸಹ, ಪ್ರತಿವಾದಿಯವರ ಸದರಿ ವಕೀಲರ ನಿರಂತರ ಗೈರು ಹಾಜರಿಯ ಕಾರಣ, ಈ ನ್ಯಾಯಾಲಯವು,ದಿನಾಂಕ: 03-09-2020 ವಿವರವಾದ ಆದೇಶದ ಮೂಲಕ, ಸದರಿ ಪುನರೀಕ್ಷಣಾ ಅರ್ಜಿಯಲ್ಲಿನ ಪ್ರತಿವಾದಿಗೆ ವಕೀಲರಾದ ಶ್ರೀಮತಿ ಪಿ.ವಿ. ಕಲ್ಪನರವರನ್ನು ನ್ಯಾಯಾಲಯ ಸಲಹೆಗಾರರನ್ನಾಗಿ (ಅಮಿಕಸ್ ಕ್ಯೂರಿ) ನೇಮಕ ಮಾಡಿದೆ.ಆದಾಗ್ಯೂ, ಅಪರಾಧ ಪುನರೀಕ್ಷಣಾ ಅರ್ಜಿಸಂಖ್ಯೆ: 1358/2010 ರಲ್ಲಿ ಪುನರೀಕ್ಷಣಾ ಅರ್ಜಿದಾರರಾಗಿ ಅದೇ ದೂರುದಾರರು ತನ್ನ ವಕೀಲರ ಮೂಲಕವೇ ಪ್ರತಿನಿಧಿಸಲ್ಪಟ್ಟಿದ್ದಾರೆ.

5. ಅಧಿವಿಚಾರಣಾ ನ್ಯಾಯಾಲಯ ಮತ್ತು ಸತ್ರ ನ್ಯಾಯಾಧೀಶರುಗಳ ನ್ಯಾಯಾಲಯದ ದಾಖಲೆಗಳನ್ನು ತರಿಸಲಾಯಿತು ಹಾಗೂ ಅವುಗಳನ್ನು ಈ ನ್ಯಾಯಾಲಯದ ಮುಂದೆ ಇಡಲಾಗಿದೆ.

6. ಉಭಯ ಪಕ್ಷಕಾರರ ವಾದಗಳನ್ನು ಕೇಳಲಾಯಿತು.ಅಧಿವಿಚಾರಣಾ ನ್ಯಾಯಾಲಯ ಹಾಗೂ ಸತ್ರ ನ್ಯಾಯಾಧೀಶರ ನ್ಯಾಯಾಲಯದ ದಾಖಲಾತಿಗಳೂ ಸೇರಿದಂತೆ ಈ ನ್ಯಾಯಾಲಯದ ಮುಂದೆ ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಲಾಯಿತು.

7. ಉಭಯ ಪಕ್ಷಕಾರರ ವಾದಗಳನ್ನು ಕೇಳಿದ ನಂತರ, ಈ ಪುನರೀಕ್ಷಣಾ ಅರ್ಜಿಗಳಲ್ಲಿ ನನ್ನ ಪರಿಗಣನೆಗೆ ಉದ್ಭವಿಸಿದ ಅಂಶಗಳೆಂದರೆ:

[i] ಆಪಾದಿತರು ಭಾರತ ದಂಡ ಸಂಹಿತೆಯ 500 ನೇ ಪ್ರಕರಣದ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದಾರೆಂದು ಅನಾಯಾಚಿತವಾಗಿ ದೂರುದಾರರು ರುಜುವಾತುಪಡಿಸಿದ್ದಾರೆಯೇ?

[ii]ದಿನಾಂಕ: 25.10.2010 ರಂದು ಸಿ.ಸಿ.ಸಂಖ್ಯೆ .11445/2006 ರಲ್ಲಿ ಅಧಿವಿಚಾರಣಾ ನ್ಯಾಯಾಲಯವು ಆಪಾದಿತರ ವಿರುದ್ಧ ನೀಡಲಾಗಿರುವ ಶಿಕ್ಷೆ ಎ ಹೆಚ್ಚಿಸಲು ಅರ್ಹವಾಗಿದೆಯೇ?

[iii] ಈ ಪುನರೀಕ್ಷಣಾ ಅರ್ಜಿಗಳನ್ನು ಪ್ರಶ್ನಿಸಿರುವ ತೀರ್ಪುಗಳು ಹಾಗೂ ಶಿಕ್ಷೆಯ ಮೇಲಿನ ಆದೇಶಗಳು ಈ ನ್ಯಾಯಾಲಯವು ಮಧ್ಯಪ್ರವೇಶಿಸಬೇಕಾದಂತಹ ಯಾವುದೇ ಕಾನೂನುಬಾಹಿರತೆ, ಅನುಚಿತತೆಯಿ 0 ದ ಬಾಧಿತವಾಗಿದೆಯೇ?

8. ಅಧಿವಿಚಾರಣಾ ನ್ಯಾಯಾಲಯದಲ್ಲಿ ದೂರುದಾರರ ಮೊಕದ್ದಮೆಯ ಸಾರಾಂಶವೇನೆಂದರೆ, ದೂರುದಾರರು ಬೆಂಗಳೂರಿನ ಕುಟುಂಬ ನ್ಯಾಯಾಲಯದಲ್ಲಿ ತನ್ನ ಪತ್ನಿಯ ವಿರುದ್ಧ ಎಂ.ಸಿ.ಸಂಖ್ಯೆ: 959/2001 ರಲ್ಲಿ ದಾಂಪತ್ಯದ ಹಕ್ಕುಗಳ ಪೂರ್ವ ಪ್ರಾಪ್ತಿಗಾಗಿ ಕೋರಿ, ವೈವಾಹಿಕ ಮೊಕದ್ದಮೆ ಹೂಡಿದ್ದರು.ಆ ಮೊಕದ್ದಮೆಯಲ್ಲಿ ಆಪಾದಿತರು (ಪತ್ನಿ) ಹಾಜರಾಗಿ, ಮುಖ್ಯ ಅರ್ಜಿಗೆ ತಮ್ಮ ಆಕ್ಷೇಪಣಾ ಹೇಳಿಕೆಗಳನ್ನು ಸಲ್ಲಿಸಿದ್ದು, ಅದರಲ್ಲಿ ಅವರು ದೂರುದಾರರನ್ನು ಆಪಾದಿಸಿ, ಆತನು ಮದ್ಯಪಾನ ಮಾಡಿ ರಾತ್ರಿ ಹೊತ್ತಿನಲ್ಲಿ ಅವರನ್ನು ಥಳಿಸುತ್ತಿದ್ದರು ಎಂದು ಕೆಲವು ಮಾನಹಾನಿಕರ ಆಪಾದನೆಗಳನ್ನು ಮಾಡಿದರು.ಅಲ್ಲದೆ, ಆತನು ನಗ್ನವಾಗಿ ಅವರ ಸ್ನೇಹಿತರ ಮುಂದೆ ನೃತ್ಯ ಮಾಡಬೇಕೆಂದು ಒತ್ತಾಯಿಸುತ್ತಿದ್ದರು.ಅವರು ತಮ್ಮ ಸ್ನೇಹಿತರ ತಲೆ ಹಿಡುಕರಾಗಿ ಕೂಡ ಕೆಲಸ ಮಾಡುತ್ತಿದ್ದರೆಂದು ಆಪಾದಿಸಲಾಗಿದೆ.ಕುಟುಂಬ ನ್ಯಾಯಾಲಯವು, ಎಂ.ಸಿ.ಸಂಖ್ಯೆ: 959/2001 ರಲ್ಲಿದಿನಾಂಕ: 11.04.2005 ರಂದು ಹೊರಡಿಸಲಾದ ತನ್ನ ತೀರ್ಪಿನ ಮೂಲಕ ಅರ್ಜಿಯನ್ನು ಪುರಸ್ಕರಿಸಿ, ದಾಂಪತ್ಯದ ಹಕ್ಕುಗಳ ಪೂರ್ವ ಪ್ರಾಪ್ತಿಗಾಗಿ ಆದೇಶಿಸಿತು.ಆನಂತರ, ದೂರುದಾರನು, (ಪತಿ) ಎಂ.ಸಿ.ಸಂಖ್ಯೆ: 959/2001 ರಲ್ಲಿ ತನ್ನ ಆಕ್ಷೇಪಣೆಗಳ ಹೇಳಿಕೆಯಲ್ಲಿ ಆಪಾದಿತರಿಂದ ಮಾಡಲಾದ ಹೇಳಿಕೆಗಳು ಹಾಗೂ ಸದರಿ ಮೊಕದ್ದಮೆಯಲ್ಲಿ ಆಕೆಯ ಸಾಕ್ಷ್ಯ ಆತನ ಗೌರವಕ್ಕೆ ಧಕ್ಕೆ ತಂದಿದೆ ಎಂದು ಎ ಹಾಗೂ ಅದರಿಂದ ಅವನ ಮಾನಹಾನಿ ಉಂಟಾಗಿದೆಯೆಂದೂ ಆಪಾದಿಸಿ, ಅಧಿವಿಚಾರಣಾ ನ್ಯಾಯಾಲಯದಲ್ಲಿ ಸಿ.ಸಿ.ಸಂಖ್ಯೆ:11445/2006 ನ್ನು ದಾಖಲಿಸಿದರು.

9. ಅಧಿವಿಚಾರಣಾ ನ್ಯಾಯಾಲಯದಲ್ಲಿ, ದೂರುದಾರರು ಪಿಡಬ್ಲ್ಯು .1 ಆಗಿ ಸ್ವತಃ ವಿಚಾರಣೆಗೆ ಒಳಗಾದರು ಹಾಗೂ ನಿಶಾನೆ.ಪಿ .1 ರಿಂದ ನಿಶಾನೆ.ಪಿ .4 ರವರೆಗೆ ನಾಲ್ಕು ದಸ್ತಾವೇಜುಗಳನ್ನು ಗುರುತು

ಮಾಡಲಾಯಿತು.ಆಪಾದಿತರು ತಮ್ಮನ್ನು ಡಿ.ಡಬ್ಲ್ಯು.ಆಗಿ ವಿಚಾರಣೆಗೆ ಒಳಗಾದರು.ಆದರೆ ಆಕೆಯ ಕಡೆಯಿಂದ ನಿಶಾನೆಗಳಾಗಿ ಯಾವುದೇ ದಾಖಲೆಗಳನ್ನು ಗುರುತಿಸಲಿಲ್ಲ.

10. ಅಧಿವಿಚಾರಣಾ ನ್ಯಾಯಾಲಯದಲ್ಲಿ ನೀಡಲಾದ ಪಿ.ಡಬ್ಲ್ಯು.ಮತ್ತು ಡಿ.ಡಬ್ಲ್ಯು .1 ರ ಸಾಕ್ಷ್ಯದಿಂದ, ದೂರುದಾರರು ಆಪಾದಿತರ ಪತಿಯಾಗಿದ್ದು, ಎಂ.ಸಿ.ಸಂಖ್ಯೆ:959/2001 ರಲ್ಲಿ ದಾಂಪತ್ಯದ ಹಕ್ಕುಗಳ ಪೂರ್ವಪ್ರಾಪ್ತಿ ಪರಿಹಾರಕ್ಕಾಗಿ ಆಕೆಯ ವಿರುದ್ಧ ವೈವಾಹಿಕ ಮೊಕದ್ದಮೆ ಹೂಡಿದ್ದರು ಎಂಬುದು ನಿರ್ವಿವಾದ ಸಂಗತಿಯಾಗಿದೆ.ಸದರಿ ವೈವಾಹಿಕ ವ್ಯವಹರಣೆಗಳಲ್ಲಿ, ಆಪಾದಿತರು ನಿಶಾನೆ ಪಿ .4 ರ ಪ್ರಕಾರ ತಮ್ಮ ಆಕ್ಷೇಪಣಾ ಹೇಳಿಕೆಗಳನ್ನು ಸಲ್ಲಿಸಿದ್ದಾರೆ ಹಾಗೂ ನಿಶಾನೆ ಪಿ .1 ರ ಪ್ರಕಾರ ತಮ್ಮ ಸಾಕ್ಷ್ಯ ಲ್ಯು ನೀಡಿದ್ದಾರೆ.ನಿಶಾನೆ.ಪಿ .2 ಎಂ.ಸಿ.ಸಂಖ್ಯೆ:959/2001 ಮತ್ತು ಜಿ ಮತ್ತು ಡಬ್ಲ್ಯುಸಿ.ಸಂಖ್ಯೆ:36/2002 ಅಧಿ ವಿಚಾರಣಾ ನ್ಯಾಯಾಲಯದಿಂದ ಹೊರಡಿಸಲಾದ ಒಂದೇ ತೀರ್ಪಿನ ದೃಢೀಕೃತ ಪ್ರತಿಗಳಾಗಿವೆ ಎಂಬುದರಲ್ಲಿ ಯಾವುದೇ ವಿವಾದವಿಲ್ಲ.ಆ ಗಾರ್ಡಿಯನ್ ಅಂಡ್ ವಾರ್ಡ್ ಮೊಕದ್ದಮೆ ಸಹಾ ಅದೇ ದೂರುದಾರರು ಹಾಗೂ ಆಪಾದಿತರ ನಡುವಿನದಾಗಿತ್ತು.ದೂರುದಾರರ ಪರವಾಗಿ ದಾಂಪತ್ಯದ ಹಕ್ಕುಗಳ ಪೂರ್ವಪ್ರಾಪ್ತಿ ಪರಿಹಾರ ನೀಡಿ, ಹಿಂದೂ ವಿವಾಹ ಅಧಿನಿಯಮ, 1955 ರ 9 ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಲಾದ ಎಂ.ಸಿ.ಸಂಖ್ಯೆ:959/2001 ಅನ್ನುದಿನಾಂಕ: 11.04.2005 ರಂದು ಸದರಿ ಒಂದೇ ತೀರ್ಪಿನ ಮೂಲಕ ಪುರಸ್ಕರಿಸಲಾಯಿತು ಹಾಗೂ ಅವರ ಅಪ್ರಾಪ್ತ ವಯಸ್ಕ ಮಗಳನ್ನು ಸಂದರ್ಶಿಸಲು ದೂರುದಾರರಿಗೆ ಸಂದರ್ಶನದ ಹಕ್ಕನ್ನು ನೀಡಿ, ಅವರ ಜಿ ಮತ್ತು ಡಬ್ಲ್ಯುಸಿ ಸ ೦ ಖ್ಯೆ:36/2002 ನ್ನು ಸಹ ಭಾಗಶಃವಾಗಿ ಪುರಸ್ಕರಿಸಲಾಯಿತೆಂಬುದು ಒಪ್ಪಿದ ವಿಷಯವಾಗಿದೆ.ನಿಶಾನೆ.ಪಿ .3, ನಿಶಾನೆ ಪಿ .1 ಸದರಿ ಒಂದೇ ತೀರ್ಪಿಗೆ ಸಂಬಂಧಿಸಿದ ಡಿಕ್ಕಿಯಾಗಿದೆ.

11. ಪ್ರಾ.ಸಾ .1 ಆಗಿ ಆಗಿ ದೂರುದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಶಾನೆ ಪಿ .1 ರಿಂದ ನಿಶಾನೆ, ಪಿ .4 ರವರೆಗಿನ ದಸ್ತಾವೇಜುಗಳನ್ನು ಗುರುತಿಸುವುದರ ಜೊತೆಗೆ ಆಪಾದಿತರು ಮಾಡಿದ ಹೇಳಿಕೆಗಳಿಂದ ತನ್ನ ಕುಟುಂಬದ ಘನತೆಗೆ ಚ್ಯುತಿ ಬಂದಿದೆಯೆಂದು ಹೇಳಿದ್ದಾರೆ.ಅವರಿಗೆ ಆಗಿರುವ ಅವಮಾನದಿಂದ ಸಮಾಜದಲ್ಲಿ ತಾವು ತಲೆ ಎತ್ತಿ ನಡೆಯಲಾಗುತ್ತಿಲ್ಲವೆಂದು ಸಹಾ ಅವರು ಹೇಳಿದ್ದಾರೆ.

ಅವರನ್ನು ಆಪಾದಿತರ ಕಡೆಯಿಂದ ವಿವರವಾದ ಪಾಟೀ-ಸವಾಲಿಗೆ ಒಳಪಡಿಸಲಾಯಿತು.ಅದರಲ್ಲಿ ಅವರು ಆಪಾದಿತೆಯ ಆಕ್ಷೇಪಣಾ ಹೇಳಿಕೆಯ ಅಂಶಗಳನ್ನು ಸ್ವತಃ ಆಕೆಯೇ ಆತನ ಸಂಬಂಧಿಕರಿಗೆ ಬಹಿರಂಗವಾಗಿ ಹೇಳಿದ್ದಾಳೆಂದು ಹೇಳಿದ್ದಾರೆ.ಆ ಮಾಹಿತಿಯು ಯಾವ ದಿನಪತ್ರಿಕೆಗಳಲ್ಲಿ ಪ್ರಕಟವಾಗಿಲ್ಲವೆಂದು ಹೇಳಿದರೂ, ಆಕ್ಷೇಪಣೆಗಳ ಹೇಳಿಕೆಯ ಅಂಶಗಳನ್ನು ಆಪಾದಿತರು ತನ್ನ ಸ್ನೇಹಿತ ವೆಂಕಟೇಶ್ ಹಾಗೂ ಚಿಕ್ಕಪ್ಪ ಹಾಗೂ ಚಿಕ್ಕಮ್ಮನಿಗೆ ತಿಳಿಸಿದ್ದಾಳೆಂದು ಹೇಳಿದ್ದಾರೆ.

ಅವನು ಮುಂದುವರೆದ ಪಾಟೀ-ಸವಾಲಿನಲ್ಲಿ, ಸದರಿ ಆಕ್ಷೇಪಣೆಗಳ ಹೇಳಿಕೆಯನ್ನು ತನ್ನ ಚಿಕ್ಕಪ್ಪ, ಚಿಕ್ಕಮ್ಮ ಹಾಗೂ ಸ್ನೇಹಿತರಿಗೆ ತೋರಿಸಿರುವುದಾಗಿ ಹೇಳಿದ್ದಾರೆ.ಮುಂದುವರೆಸುತ್ತಾ ಅವರು ವೈವಾಹಿಕ ಮೊಕದ್ದಮೆಯಲ್ಲಿ ಆಕ್ಷೇಪಣೆಗಳ ಹೇಳಿಕೆಗಳಲ್ಲಿನ ಅಂಶಗಳನ್ನು ರುಜುವಾತುಪಡಿಸಲು ಆಪಾದಿತರು ವಿಫಲರಾಗಿದ್ದಾರೆಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ ಎಂದು ಹೇಳಿದ್ದಾರೆ.ಕುಟುಂಬ ನ್ಯಾಯಾಲಯದ ತೀರ್ಪಿನ ವಿರುದ್ಧ ಆಪಾದಿತರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಲಾದ ಮೇಲ್ಮನವಿಯೂ ಸಹಾ ವಜಾ ಚ ಆಗಿದೆ. ಆತನ ಘನತೆಗೆ ಧಕ್ಕೆ ಬರುವಂತಹ ಯಾವುದೇ ಹೇಳಿಕೆಯನ್ನು ಆಪಾದಿತರು ಮಾಡಿಲ್ಲವೆಂಬ ಸೂಚನೆಯನ್ನು ಅವರು ಅಲ್ಲಗಳೆದಿದ್ದಾರೆ.

12. ಆಪಾದಿತರು ಸ್ವತಃ ಪ್ರಾ.ಸಾ .1 ಆಗಿ ವಿಚಾರಣೆಗೆ ಒಳಗಾಗಿದ್ದು, ತನ್ನ ಮುಖ್ಯ ವಿಚಾರಣೆಯಲ್ಲಿ, ತನ್ನ ಹಾಗೂ ದೂರುದಾರರ ನಡುವೆ ನಡೆದ ಘಟನೆಗಳನ್ನು ಆಕ್ಷೇಪಣೆಗಳ ಹೇಳಿಕೆಯಲ್ಲಿ ನಮೂದಿಸಿರುವುದಾಗಿ ಹೇಳಿದ್ದಾರೆ.ತದನುಸಾರವಾಗಿ, ಆಕೆಯು ಮೊಕದ್ದಮೆಯಲ್ಲಿ ತನ್ನ ಅಫಿಡಾವಿಟ್ಟನ್ನು ಸಹಾ ಸಲ್ಲಿಸಿದ್ದಾರೆ.ಆದರೆ ಆಕ್ಷೇಪಣೆಗಳ ಹೇಳಿಕೆಗಳ ಅಂಶಗಳನ್ನು ತಾನು ದೂರುದಾರರ ಸಂಬಂಧಿಕರು ಹಾಗೂ ಸ್ನೇಹಿತರಿಗೆ ಬಹಿರಂಗಪಡಿಸಿಲ್ಲ ಎಂದು, ಆದರೆ ಆದರೆ ಆಕೆಯ ತಂದೆ-ತಾಯಿಯರಿಗೆ ಆ ವಿವರಗಳು ಗೊತ್ತು ಎಂದು ಹೇಳಿದ್ದಾರೆ.ಆಕೆ ಹಾಗೂ ದೂರುದಾರರ ನಡುವೆ ನಡೆದ ಘಟನೆಗಳನ್ನು ಮಾತ್ರ ತಾನು ತಿಳಿಸಿರುವುದಾಗಿ ಮತ್ತೆ ಪುನರುಚ್ಚರಿಸಿದ್ದಾಳೆ.

ಆಕೆಯ ಪಾಟಿ ಸವಾಲಿನಲ್ಲಿ, ಆಕೆಯ ಪತಿಯು, ಅವರ ವಿರುದ್ಧ ದಾಂಪತ್ಯ ಹಕ್ಕುಗಳ ಪೂರ್ವ ಪ್ರಾಪ್ತಿಗಾಗಿ ಅರ್ಜಿ ಸಲ್ಲಿಸಿದ್ದು, ಅದು ಪತಿಯ ಪರ ಆಯಿತೆಂಬುದನ್ನು ಒಪ್ಪಿಕೊಂಡಿದ್ದಾರೆ.ಅಲ್ಲದೆ, ಅದರ ವಿರುದ್ಧ ತಾನು ಮೇಲ್ಮನವಿ ಸಲ್ಲಿಸಿದ್ದೆ ಎಂದು ಸಹ ಆಕೆ ಒಪ್ಪಿಕೊಂಡಿದ್ದಾಳೆ.ಸದರಿ ವೈವಾಹಿಕ ಮೊಕದ್ದಮೆಯಲ್ಲಿ ಆಕ್ಷೇಪಣೆಗಳ ಹೇಳಿಕೆಯಾಗಿ ನಿಶಾನೆ ಪಿ .4 ರಲ್ಲಿನ ದಸ್ತಾವೇಜನ್ನು ತಾನು ಸಲ್ಲಿಸಿದ್ದಾಗಿ ಅವಳು ಒಪ್ಪಿಕೊಂಡಿದ್ದಾಳೆ.ನಿಶಾನೆ.ಪಿ .1 ಇದು ಅದೇ ವೈವಾಹಿಕ ಮೊಕದ್ದಮೆಯಲ್ಲಿ ಆಕೆಯ ಮೌಖಿಕ ಸಾಕ್ಷ್ಯದ ದೃಢೀಕೃತ ಪ್ರತಿಯೆಂದೂ ಸಹ ಅವರು ಒಪ್ಪಿಕೊಂಡಿದ್ದಾರೆ.ಆದರೆ, ಆ ಎರಡು ದಸ್ತಾವೇಜುಗಳು ದೂರುದಾರರ ವಿರುದ್ಧ ನಿಂದನಾತ್ಮಕ ಪದಗಳನ್ನು ಒಳಗೊಂಡಿದ್ದವು ಎಂಬುದನ್ನು ಆಕೆಯು ಅಲ್ಲಗಳೆದಿದ್ದಾಳೆ.ಆದರೆ, ವಾಸ್ತವಾಂಶವನ್ನು ನಮೂದಿಸಲಾಗಿದೆಯೆಂದು ಅವಳು ಹೇಳಿದ್ದಾಳೆ.ಆಪಾದಿತನು ತಲೆಹಿಡುಕ, ಬೋಕರ್ ಎಂದು ತನ್ನ ಹೇಳಿಕೆಯಲ್ಲಿ ಅ ಹೇಳಿದ್ದೇವೆಂಬುದನ್ನು ಆಕೆಯು ಅಲ್ಲಗಳೆದರೂ ಸಹ, ದೂರುದಾರರು ಇತರ ಮಹಿಳೆಯರೊಂದಿಗೆ ಅನೈತಿಕ ಸಂಬಂಧ ಹೊಂದಿದ್ದರು ಎಂದು ಹೇಳಿರುವುದಾಗಿ ಒಪ್ಪಿಕೊಂಡಿದ್ದಾರೆ ಹಾಗೂ ಮುಂದುವರೆದು ಆತನು ಇತರ ಗಂಡಸರನ್ನು ಕರೆದುಕೊಂಡು ಬರುತ್ತಿದ್ದನೆಂದು ಹೇಳಿದ್ದಾಳೆ.ತನ್ನ ಆಕ್ಷೇಪಣೆಗಳ ಹೇಳಿಕೆಯಲ್ಲಿ ಮಾಡಲಾದ ಹೇಳಿಕೆಗಳನ್ನು ಆಕೆ (ಆಪಾದಿತೆ) ರುಜುವಾತುಪಡಿಸಲು ಸಾಧ್ಯವಾಗಲಿಲ್ಲವೆಂದು ಕುಟುಂಬ ನ್ಯಾಯಾಲಯವು ತನ್ನ ತೀರ್ಪಿನಲ್ಲಿ ಹೇಳಿದೆಯೆಂಬ ಸೂಚನೆಯನ್ನು ಸಹ ಒಪ್ಪಿಕೊಂಡಿರುತ್ತಾಳೆ.

13. ಭಾರತ ದಂಡ ಸಂಹಿತೆ, 1860 ರ 499 ನೇ ಪ್ರಕರಣವು ' ಮಾನಹಾನಿ ಎಂದರೆ ಏನು ಎಂಬುದನ್ನು ಪರಿಭಾಷಿಸಿದ್ದು ಅದನ್ನು ಈ ಕೆಳಗಿನಂತೆ ಓದಲಾಗಿದೆ:

499. ಮಾನಹಾನಿ.-ಉಚರಿಸಿದ ಉಚ್ಚರಿಸಿದ ಅಥವಾ ಓದಲ್ಪಡಬೇಕೆಂದು ಉದ್ದೇಶವುಳ್ಳ ಅಕ್ಷರಗಳಿಂದ ಅಥವಾ ಸನ್ನೆಗಳಿಂದ ಅಥವಾ ಕಿವಿಗೆ ಕೇಳಿಸುವಂತಹ ಮಾತುಗಳಿಂದ ಯಾರಾದರೂ ಯಾರೇ ವ್ಯಕ್ತಿಗೆ ಸ ಂ ಬ ಂ ಧಿಸಿದ ಂ ತೆ ಆರೋಪಣೆಯನ್ನು ಆ ವ್ಯಕ್ತಿಯ ಖ್ಯಾತಿಗೆ ಹಾನಿಯುಂಟು ಮಾಡುವ ಉದ್ದೇಶದಿಂದ ಅಥವಾ ಅಂಥ ಆರೋಪಣೆ ಮಾಡಿದರೆ, ಅದರಿಂದ ಆ ವ್ಯಕ್ತಿಯ ಖ್ಯಾತಿಗೆ ಹಾನಿಯುಂಟಾಗುವುದೆಂಬುದು ಗೊತ್ತಿದ್ದರೂ ಅಥವಾ ಹಾಗೆ ನಂಬಲು ಕಾರಣವಿದ್ದರೂ ಮಾಡಿದರೆ ಅಥವಾ ಪ್ರಕಟಿಸಿದರೆ ಆ ವ್ಯಕ್ತಿಯು, ಇಲ್ಲಿ ಇನ್ನು ಮುಂದೆ ಹೊರತುಪಡಿಸಿದ ಸಂದರ್ಭಗಳ ಹೊರತು, ಆ ವ್ಯಕ್ತಿಯ ಮಾನಹಾನಿ ಮಾಡುತ್ತಾನೆಂದು ಹೇಳಲಾಗುತ್ತದೆ.

ವಿವರಣೆ 1.-ಮೃತ ವ್ಯಕ್ತಿಯ ಮೇಲೆ ಯಾವುದೇ ಆರೋಪಣೆ ಮಾಡಿದಾಗ ಅ ಂ ಥ ಆರೋಪಣೆಯು ಆ ವ್ಯಕ್ತಿಯ ಜೀವಂತವಾಗಿದ್ದಿದ್ದರೆ, ಆ ವ್ಯಕ್ತಿಯ ಖ್ಯಾತಿಗೆ ಹಾನಿಯನ್ನುಂಟು ಮಾಡಬಹುದಾಗಿದ್ದಿದ್ದರೆ ಮತ್ತು ಆ ವ್ಯಕ್ತಿಯ ಕುಟುಂಬದ ಅಥವಾ ಹತ್ತಿರದ ಇತರ ಸ ಂ ಬ ಂ ಧಿಗಳ ಭಾವನೆಗಳಿಗೆ ನೋವುಂಟು ಮಾಡಲು ಉದ್ದೇಶ ಉಳ್ಳದ್ದಾಗಿ, ಅದು ಮಾನಹಾನಿಯೆಂದಾಗಬಹುದು.

ವಿವರಣೆ 2.-ಕಂಪನಿಗೆ ಅಥವಾ ಸಂಸ್ಥೆಗೆ ಅಥವಾ ವ್ಯಕ್ತಿಗಳ ಸಮುದಾಯಕ್ಕೆ ಸಂಬಂಧಿಸಿದಂತೆ ಮಾಡಿದ ಆರೋಪಣೆಯು ಮಾನಹಾನಿಯೆ0ದಾಗಬಹುದು.

ವಿವರಣೆ 3.-ಪರ್ಯಾಯ ರೂಪದಲ್ಲಿ ಅಥವಾ ವ್ಯಂಗ್ಯವಾಗಿ ವ್ಯಕ್ತಪಡಿಸಿದ ಆರೋಪಣೆಯು ಮಾನಹಾನಿಯೆಂದಾಗಬಹುದು.

ವಿವರಣೆ 4.-ಯಾವುದೇ ಆರೋಪಣೆಯು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ, ವ್ಯಕ್ತಿಯ ಗೌರವ ಘನತೆಯನ್ನು ಆ ಆರೋಪಣೆಯು ಆ ವ್ಯಕ್ತಿಯ ನೈತಿಕ ಅಥವಾ ಬೌದ್ಧಿಕ ಚಾರಿತ್ರ್ಯವನ್ನು ಅಥವಾ ಆ ವ್ಯಕ್ತಿಯ ಜಾತಿಗೆ ಅಥವಾ ಉದ್ಯೋಗಕ್ಕೆ ಸಂಬಂಧಪಟ್ಟಂತೆ ಆ ವ್ಯಕ್ತಿಯ ಚಾರಿತ್ರ್ಯವನ್ನು ಅಥವಾ ಆ ವ್ಯಕ್ತಿಯ ಗೌರವವನ್ನು ಕುಗ್ಗಿಸುತ್ತದೆಂದು ಇತರರು ಅಭಿಪ್ರಾಯಪಟ್ಟಿದ್ದ ಹೊರತು ಅಥವಾ ಆ ವ್ಯಕ್ತಿಯ ದೇಹವು ಅಸಹ್ಯಕರವಾದ ಸ್ಥಿತಿಯಲ್ಲಿದೆಯೆಂದು ಅಥವಾ ಆ ವ್ಯಕ್ತಿಯ ಚಹರೆಯು ಸಾಮಾನ್ಯವಾಗಿ ಮಾನಗೇಟ್ಟಂತೆ ಕಾಣುವಂತಿದೆಯೆಂದು ನಂಬುವಂತೆ ಮಾಡಿದ್ದ ಹೊರತು, ಆ ವ್ಯಕ್ತಿಯ ಖ್ಯಾತಿಗೆ ಹಾನಿಯುಂಟು ಮಾಡುತ್ತದೆಂದು ಹೇಳಲಾಗುವುದಿಲ್ಲ.

ಮೊದಲನೆಯ ಅಪವಾದ.-ಸತ್ಯ ಸಂಗತಿ ಕುರಿತಂತೆ ಯಾವ ಆರೋಪಣೆಯನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಮಾಡುವುದು ಅಥವಾ ಪ್ರಕಟಿಸುವುದು ಅಗತ್ಯವೋ ಅಂತಹ ಆರೋಪಣೆ.ಯಾರೇ ವ್ಯಕ್ತಿಗೆ ಸಂಬಂಧಿಸಿದಂತೆ ಯಾವುದೇ ಸತ್ಯ ಸಂಗತಿಯನ್ನು ಬಯಲಿಗೆಳೆಯಲು ಆರೋಪಿಸುವುದು ಅಥವಾ ಆರೋಪವನ್ನು ಪ್ರಕಟಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯವಾಗಿದ್ದರೆ, ಹಾಗೆ ಆರೋಪಿಸುವುದು

ಮಾನಹಾನಿಯೆನಿಸುವುದಿಲ್ಲ, ಹಾಗೆ ಮಾಡುವಾಗ ಸಾರ್ವಜನಿಕ ಹಿತದೃಷ್ಟಿಯುಂಟೇ ಅಥವಾ ಇಲ್ಲವೇ ಎಂಬುದು ಸಂಗತಿಯ ಪ್ರಶ್ನೆ.

ಎರಡನೆಯ ಅಪವಾದ.-ಲೋಕ ನೌಕರರ ಬಹಿರಂಗ ವರ್ತನೆ.ಸಾರ್ವಜನಿಕ ಪ್ರಕಾರ್ಯವನ್ನು ನಿರ್ವಹಿಸುತ್ತಿರುವ ಲೋಕ ನೌಕರನ ನಡತೆಗೆ ಸಂಬಂಧಿಸಿದಂತೆ ಅಥವಾ ಆತನ ಚಾರಿತ್ರ್ಯವು ಆ ನಡತೆಯಲ್ಲಿ ಕಂಡುಬರುವಷ್ಟು ಮಟ್ಟಿಗೆ ಮಾತ್ರವೇ ಅವನ ಚಾರಿತ್ರಕ್ಕೆ ಸಂಬಂಧಿಸಿದಂತೆ ಆದರೆ ಅಷ್ಟನ್ನು ಮೀರದಂತೆ, ಯಾವುದೇ ಬಗೆಯ ಅಭಿಪ್ರಾಯವನ್ನು ಸದ್ಭಾವನೆಯಿಂದ ವ್ಯಕ್ತಪಡಿಸುವುದು ಮಾನಹಾನಿಯೆಂದಾಗುವುದಿಲ್ಲ.

ಮೂರನೆಯ ಅಪವಾದ.-ಯಾವುದೇ ಸಾರ್ವಜನಿಕ ಪ್ರಶ್ನೆಗೆ ಸಂಬಂಧಿಸಿದಂತೆ ಯಾರೇ ವ್ಯಕ್ತಿಯ ನಡತೆ.-ಯಾವುದೇ ಸಾರ್ವಜನಿಕ ಪ್ರಶ್ನೆಯ ಬಗೆಗಿನ ಯಾರೇ ವ್ಯಕ್ತಿಯ ನಡತೆಗೆ ಸಂಬಂಧಿಸಿದಂತೆ ಮತ್ತು ಅವನ ಚಾರಿತ್ರ್ಯವು ಆ ನಡತೆಯಲ್ಲಿ ಕಂಡುಬರುವಷ್ಟು ಮಟ್ಟಿಗೆ ಮಾತ್ರವೇ ಅವನ ಚಾರಿತ್ರ್ಯಕ್ಕೆ ಸಂಬಂಧಿಸಿದಂತೆ, ಆದರೆ ಅಷ್ಟನ್ನು ಮೀರದಂತೆ, ಯಾವುದೇ ಬಗೆಯ ಅಭಿಪ್ರಾಯವನ್ನು ಸದ್ಭಾವನೆಯಿಂದ ವ್ಯಕ್ತಪಡಿಸುವುದು ಮಾನಹಾನಿಯೆ0ದಾಗುವುದಿಲ್ಲ.

ನಾಲ್ಕನೆಯ ಅಪವಾದ.-ನ್ಯಾಯಾಲಯಗಳ ವ್ಯವಹರಣೆಗಳ ವರದಿಗಳ ಪ್ರಕಟಣೆ.-ನ್ಯಾಯಾಲಯದ ವ್ಯವಹರಣೆಗಳ ಬಗ್ಗೆ ಅಥವಾ ಅಂಥ ಯಾವುದೇ ವ್ಯವಹರಣೆಗಳ ಯಾವುದೇ ಫಲಿತಾಂಶದ ಬಗ್ಗೆ ಬಹುಮಟ್ಟಿಗೆ ಯಥಾರ್ಥವಾದ ವರದಿಯನ್ನು ಪ್ರಕಟಿಸುವುದು ಮಾನಹಾನಿಯೆಂದಾಗುವುದಿಲ್ಲ.

ವಿವರಣೆ.-ನ್ಯಾಯಾಲಯದಲ್ಲಿ ಆರೋಪ ವಿಚಾರಣೆ ಯಾಗುವುದಕ್ಕೂ ಮುಂಚೆ ಓಪನ್ ಕೋರ್ಟ್‌ನಲ್ಲಿ ವಿಚಾರಣೆ ನಡೆಸುವ ಜಸ್ಟೀಸ್ ಆಫ್ ಪೀಸ್ರನ್ನು ಅಥವಾ ಇತರ ಅಧಿಕಾರಿಯನ್ನು ಮೇಲಿನ ಪ್ರಕರಣದ ಅರ್ಥ ವ್ಯಾಪ್ತಿಯಲ್ಲಿ ನ್ಯಾಯಾಲಯವೆಂದು ಪರಿಗಣಿಸಲಾಗುತ್ತದೆ.

ಐದನೆಯ ಅಪವಾದ.-ನ್ಯಾಯಾಲಯದಲ್ಲಿ ತೀರ್ಮಾನವಾದ ಮೊಕದ್ದಮೆಗಳ ಗುಣಾವಗುಣಗಳು ಅಥವಾ ಸಾಕ್ಷಿಗಳ ಮತ್ತು ಸಂಬಂಧಪಟ್ಟ ಇತರರ ವರ್ತನೆ.-ನ್ಯಾಯಾಲಯವು ತೀರ್ಮಾನಿಸಿದ ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ಮೊಕದ್ದಮೆಯ ಗುಣಾವಗುಣಗಳಿಗೆ ಸಂಬಂಧಿಸಿದಂತೆ ಅಥವಾ ಅಂಥ ಯಾವುದೇ ಮೊಕದ್ದಮೆಯಲ್ಲಿ ಪಕ್ಷಕಾರ, ಸಾಕ್ಷಿ ಅಥವಾ ಏಜೆಂಟನಾಗಿರುವ ಯಾರೇ ವ್ಯಕ್ತಿಯ ವರ್ತನೆಗೆ ಸಂಬಂಧಿಸಿದಂತೆ ಅಥವಾ ಅಂಥ ವ್ಯಕ್ತಿಯ ಚಾರಿತ್ರ್ಯವು ಆ ವರ್ತನೆಯಲ್ಲಿ ಕಂಡುಬರುವಷ್ಟರ ಮಟ್ಟಿಗೆ ಮಾತ್ರವೇ ಅವನ ಚಾರಿತ್ರ್ಯಕ್ಕೆ ಸಂಬಂಧಿಸಿದಂತೆ ಆದರೆ ಅಷ್ಟನ್ನು ಮೀರದಂತೆ, ಸದ್ಭಾವನೆಯಿಂದ ಯಾವುದೇ ಬಗೆಯ ಅಭಿ ಪ್ರಾಯವನ್ನು ವ್ಯಕ್ತಪಡಿಸುವುದು ಮಾನ ಹಾನಿಯೆಂದಾಗುವುದಿಲ್ಲ.

ಆರನೆಯ ಪವಾದ.-ಸಾರ್ವಜನಿಕ ಪ್ರದರ್ಶನದ ಗುಣಾವಗುಣ.-ಸಾರ್ವಜನಿಕರ ಅಭಿಪ್ರಾಯಕ್ಕಾಗಿ ಯಾವ ಪ್ರದರ್ಶನವನ್ನು ಪ್ರಸ್ತುತಪಡಿಸಲಾಯಿತೋ ಆ ಯಾವುದೇ ಪ್ರದರ್ಶನದ ಗುಣಾವಗುಣಗಳಿಗೆ ಸಂಬಂಧಿಸಿದಂತೆ ಅಥವಾ ಅಂಥ ಪ್ರದರ್ಶನದಲ್ಲಿ ಆ ಕರ್ತೃವಿನ ಚಾರಿತ್ರ್ಯವು ಕಂಡುಬರುವಷ್ಟು ಮಟ್ಟಿಗೆ ಮಾತ್ರ, ಆದರೆ ಅಷ್ಟನ್ನು ಮೀರದೆ, ಅವನ ಚಾರಿತ್ರ್ಯಕ್ಕೆ ಸಂಬಂಧಿಸಿದಂತೆ ಸದ್ಭಾವನೆಯಿಂದ ವ್ಯಕ್ತಪಡಿಸಿದ ಯಾವುದೇ ಅಭಿಪ್ರಾಯವು ಮಾನಹಾನಿಯಾಗುವುದಿಲ್ಲವೆಂದಾಗುತ್ತದೆ.

ವಿವರಣೆ.-ಪ್ರದರ್ಶನವನ್ನು ಸಾರ್ವಜನಿಕರ ಅಭಿಪ್ರಾಯಕ್ಕಾಗಿ ಸ್ಪಷ್ಟವಾಗಿ ಆಗಲಿ ಅಥವಾ ಹಾಗೆ ಸಾರ್ವಜನಿಕರ ಅಭಿಪ್ರಾಯಕ್ಕಾಗಿ ಪ್ರಸ್ತುತಪಡಿಸಲಾಗಿದೆಯೆಂದು ಕರ್ತೃವಿನ ಯಾವ ಕಾರ್ಯಗಳಿಂದ ಇ ಂ ಗಿತವಾಗುತ್ತದೆ ಆ ಕಾರ್ಯಗಳಿ ಂ ದಲೂ ಪ್ರಸ್ತುತ ಪಡಿಸಬಹುದು.

ಏಳನೆಯ ಅಪವಾದ.ಇನ್ನೊಬ್ಬನ ಮೇಲೆ ಕಾನೂನುಬದ್ಧ ಅಧಿಕಾರವನ್ನು ಹೊಂದಿರುವ ವ್ಯಕ್ತಿಯು ಅವನನ್ನು ಕುರಿತು ಸದ್ಭಾವನೆಯಿಂದ ಮಾಡಿದ ಖಂಡನೆ.-ಇನ್ನೊಬ್ಬ ವ್ಯಕ್ತಿಯ ಮೇಲೆ ಕಾನೂನಿನಿಂದ ಪ್ರದತ್ತವಾದ ಅಥವಾ ಆ ಇನ್ನೊಬ್ಬನ ಜೊತೆ ಮಾಡಿಕೊಂಡ ಕಾನೂನುಬದ್ಧ ಕರಾರಿನಿಂದ ಉದ್ಭವಿಸಿದ ಯಾವುದೇ ಅಧಿಕಾರವನ್ನು ಹೊಂದಿರುವ ವ್ಯಕ್ತಿಯು ಆ ಇನ್ನೊಬ್ಬ ವ್ಯಕ್ತಿಯ ವರ್ತನೆಯನ್ನು ಕುರಿತು ಅಂಥ ಕಾನೂನುಬದ್ಧ ಅಧಿಕಾರಕ್ಕೆ ಸಂಬಂಧಿಸಿದ ವಿಚಾರಗಳಲ್ಲಿ ಸದ್ಭಾವನೆಯಿಂದ ಯಾ ವುದೇ ಖ ಂ ಡ ನ ಂ ತನು ಮಾಡುವುದು ಮಾನಹಾನಿಯೆಂದಾಗುವುದಿಲ್ಲ.

ಎಂಟನೆಯ ಅಪವಾದ.-ಅಧಿಕೃತ ವ್ಯಕ್ತಿಯ ಮುಂದೆ ಸದ್ಭಾವನೆಯಿಂದ ಆಪಾದನೆ ಮಾಡುವುದು.-ಯಾರೇ ವ್ಯಕ್ತಿಯ ವಿರುದ್ಧ ಆಪಾದನೆಯನ್ನು ಆ ಆಪಾದನೆಯ ವಿಷಯಕ್ಕೆ ಸಂಬಂಧಿಸಿದಂತೆ ಆ ವ್ಯಕ್ತಿಯ ಮೇಲೆ ಕಾನೂನುಬದ್ಧ ಅಧಿಕಾರ ಹೊಂದಿರುವ ಯಾರೇ ವ್ಯಕ್ತಿಯ ಮುಂದೆ ಸದ್ಭಾವನೆಯಿಂದ ಮಾಡುವುದು ಮಾನಹಾನಿಯೆನಿಸುವುದಿಲ್ಲ.

ಒಂಭತ್ತನೆಯ ಅಪವಾದ.ವ್ಯಕ್ತಿಯು ತನ್ನ ಅಥವಾ ಇತರರ ಹಿತಾಸಕ್ತಿಗಳ ರಕ್ಷಣೆಗಾಗಿ ಸದ್ಭಾವನೆಯಿಂದ ಮಾಡಿದ ಆರೋಪ. ಇನ್ನೊಬ್ಬ ವ್ಯಕ್ತಿಯ ಚಾರಿತ್ರಕ್ಕೆ ಸಂಬಂಧಿಸಿದಂತೆ ಮಾಡಿದ ಆರೋಪವು, ಆ ಆರೋಪವನ್ನು ಮಾಡುವ ವ್ಯಕ್ತಿಯ ಅಥವಾ ಯಾರೇ ಇತರ ವ್ಯಕ್ತಿಯ ಹಿತಾಸಕ್ತಿಯ ರಕ್ಷಣೆಗಾಗಿ ಅಥವಾ ಸಾರ್ವಜನಿಕ ಹಿತಕ್ಕಾಗಿ ಮಾಡಿದ್ದರೆ ಅದು ಮಾನ ಹಾನಿಯೆಂದಾಗುವುದಿಲ್ಲ.

ಹತ್ತನೆಯ ಅಪವಾದ.ಯಾರಿಗೆ ಎಚ್ಚರಿಕೆ ಕೊಡಲಾಗಿದೆಯೋ ಅವನ ಒಳಿತಿಗಾಗಿ ಅಥವಾ ಸಾರ್ವಜನಿಕ ಹಿತಕ್ಕೆಂದು ಉದ್ದೇಶಿಸಲಾದ ಎಚ್ಚರಿಕೆ.ವ್ಯಕ್ತಿಗೆ ಇನ್ನೊಬ್ಬ ವ್ಯಕ್ತಿಯ ವಿರುದ್ಧ ಸದ್ಭಾವ ವ ನ ನೆ ಯಿ ಂ ದ ಎಚ್ಚರಿಕ್ ಕೊಡುವುದು ಚ ಮಾನಹಾನಿಯೆನಿಸುವುದಿಲ್ಲ; ಪರಂತು ಹಾಗೆ ಯಾರಿಗೆ ಎಚ್ಚರಿಕೆ ಕೊಡಲಾಯಿತೋ ಆ ವ್ಯಕ್ತಿಯ ಹಿತವಾಗಲಿ ಅಥವಾ ಯಾರಲ್ಲಿ ಆ ವ್ಯಕ್ತಿಗೆ ಹಿತಾಸಕ್ತಿ ಇರುವುದೋ ಅವನ ಹಿತವಾಗಲಿ ಅಥವಾ ಸಾರ್ವಜನಿಕ ಹಿತವಾಗಲಿ ಅಂಥ ಎಚ್ಚರಿಕೆಯ ಉದ್ದೇಶವಾಗಿರಬೇಕು.

ಸದರಿ ಪ್ರಕರಣವನ್ನು ಓದಲಾಗಿ, ಒಂದು ಕೃತ್ಯವು, ಮಾನಹಾನಿ ಯಾಗಬೇಕಾದರೆ, ಅದು ( 1) ಯಾರೇ ವ್ಯಕ್ತಿಗೆ ಸಂಬಂಧಿಸಿ ಮಾಡಲಾದ ಆರೋಪಣೆ(ii) ಅಂತಹ ಆರೋಪಣೆಯು ಉಚ್ಚರಿಸಿದ ಅಥವಾ ಬರೆಯಲ್ಪಟ್ಟ ಪದಗಳ ಮೂಲಕ ಅಥವಾ ಚಿಹ್ನೆಗಳಿಂದ ಅಥವಾ ದೃಶ್ಯರೂಪಗಳ ಮೂಲಕ ಇರಬಹುದು;(iii) ಅಂತಹ ಆಪಾದನೆಯನ್ನು ಇತರ ವ್ಯಕ್ತಿಗೆ ಹಾನಿಯುಂಟು ಮಾಡುವ ಉದ್ದೇಶದಿಂದ ಅಥವಾ ಆ ಆರೋಪಣೆಯು ಇತರ ವ್ಯಕ್ತಿಯ ಖ್ಯಾತಿಗೆ ಹಾನಿಯುಂಟು ಮಾಡುತ್ತದೆಂದು ತಿಳಿದೂ ಅಥವಾ ಹಾಗೆ ನಂಬಲು ಕಾರಣವಿದ್ದೂ ಮಾಡುವ ಅಥವಾ ಪ್ರಕಟಿಸುವ ಮತ್ತು ಅದರ ಪರಿಣಾಮವು, ಅಂತಹ ಆರೋಪಗಳನ್ನು ಯಾವ ವ್ಯಕ್ತಿಯ ವಿರುದ್ಧ ಮಾಡಲಾಗಿದೆಯೋ ಆ ವ್ಯಕ್ತಿಯ ಖ್ಯಾತಿಗೆ ಹಾನಿಯನ್ನುಂಟು ಮಾಡುವಂತಿರಬೇಕು.

ಆದಾಗ್ಯೂ, ಸದರಿ ವ್ಯಾಖ್ಯಾನವು ಹತ್ತು ಅಪವಾದಗಳನ್ನು ನೀಡುತ್ತದೆ ಮತ್ತು ಒಂದು ಕೃತ್ಯವು, ಮಾನಹಾನಿಯ ವ್ಯಾಖ್ಯಾನದ ವಿವರಣೆಯನುಸಾರ ಇದ್ದಾಗ್ಯೂ, ಅದು ಇನ್ನೂ ಯಾವುದೇ ಒಂದು ಅಥವಾ ಅದಕ್ಕಿಂತಲೂ ಹೆಚ್ಚು ಅಪವಾದಗಳ ಅಡಿಯಲ್ಲಿ ಬಂದರೆ, ಅದನ್ನು ಭಾರತ ದಂಡ ಸಂಹಿತೆಯ 499 ನೇ ಪ್ರಕರಣದ ಮೇರೆಗೆ ಅದನ್ನು ' ಮಾನಹಾನಿ ' ಯೆಂದು ಪರಿಗಣಿಸಲಾಗುವುದಿಲ್ಲ.

ಒಂದು ಪ್ರಕಟಣೆಯು ಮಾನಹಾನಿ ಎಂದು ಪರಿಭಾವಿಸಬೇಕಾದರೆ, ಯಾವ ವ್ಯಕ್ತಿಗಳ ಅಭಿಪ್ರಾಯದ ಪ್ರಕಾರ, ನ್ಯಾಯಾಲಯವು ಸರಿಯಾಗಿ ಗುರುತಿಸಬಹುದಾದ ಮತ್ತು ಆತನ ಬಗ್ಗೆ ದುರಭಿಪ್ರಾಯವನ್ನು ಮೂಡಿಸುವುದನ್ನು ಪ್ರೋತ್ಸಾಹಿಸಲು ಅವರಿಗೆ ಪ್ರೇರೇಪಿಸಬಹುದಾಗಿದೆಯೋ ಅಂತಹ ವ್ಯಕ್ತಿಗಳ ಅಭಿಪ್ರಾಯದಲ್ಲಿ ದೂರುದಾರನನ್ನು ಕುಗ್ಗಿಸುವಂತೆ ಒಲವು ತೋರಬೇಕು.

ಆದಾಗ್ಯೂ, ದೂರುದಾರನು ಸಮುದಾಯದ ಪ್ರತಿಯೊಬ್ಬರ ದೃಷ್ಟಿಯಲ್ಲಿ ಅಥವಾ ಅವನ ಎಲ್ಲಾ ಸಹಚರರ ದೃಷ್ಟಿಯಲ್ಲಿ ತನ್ನನ್ನು ಪೂರ್ವಾಗ್ರಹಪಡಿಸುವ ಆರೋಪಣೆಯ ಪ್ರವೃತ್ತಿಯನ್ನು ತೋರಿಸಬೇಕಾದ ಅಗತ್ಯವಿಲ್ಲವಾದರೂ, ಅವರು ಸಂಪೂರ್ಣವಾಗಿ ವಿಭಿನ್ನ ಸಮುದಾಯದವರಾಗಿದ್ದರೂ ಅಥವಾ ದೂರುದಾರರ ಸಹವರ್ತಿಗಳಾಗಿದ್ದರೂ ಸಹ, ಗಣನೀಯ ಗೌರವಾನ್ವಿತ ವರ್ಗವೆಂಬ ಅಭಿಪ್ರಾಯದಲ್ಲಿ ಪ್ರಕಟಣೆಯು ಅವನನ್ನು ಕುಗ್ಗಿಸುತ್ತದೆ ಎಂದು ದೃಢಪಡಿಸಲು ಸಾಕಷ್ಟಾಗುತ್ತದೆ.

14. ಆಪಾದಿತರ ವಕೀಲರು ನಿಶಾನೆ.ಪಿ .4 ಮತ್ತು ನಿಶಾನೆ.ಪಿ .1 ರ ಪ್ರಕಾರ ವೈವಾಹಿಕ ಮೊಕದ್ದಮೆಯಲ್ಲಿ ಆಪಾದಿತಳು ಮಾಡಿದ ಹೇಳಿಕೆಗಳು, ಪ್ರಕಟಣೆ ಮಾಡಿದಂತಾಗುವುದಿಲ್ಲವೆಂದು ನಿವೇದಿಸಿಕೊಳ್ಳುತ್ತಾ, ಜೆ. ಜ್ಞಾನ ಕುಮಾರ್ -ವಿರುದ್ಧ-ಜಾಯ್ ಕಣ್ಮಣಿ ' ಮೊಕದ್ದಮೆಯಲ್ಲಿ ಮದ್ರಾಸ್ ಉಚ್ಚ ನ್ಯಾಯಾಲಯವು ನೀಡಿದ ತೀರ್ಪಿನ ಮೇಲೆ ಅವಲಂಬಿತರಾಗಿದ್ದು, ಅದರಲ್ಲಿ ಪ್ರತಿವಾದಿ ಪತ್ನಿಯು ಭಾರತ ದಂಡ ಸಂಹಿತೆಯ 500 ನೇ ಪ್ರಕರಣದ ಅಡಿಯಲ್ಲಿ ಶಿಕ್ಷಿಸಬಹುದಾದ ಆಪಾದಿತ ಅಪರಾಧಕ್ಕಾಗಿ ತನ್ನ ಪತಿಯ ವಿರುದ್ಧ ಖಾಸಗಿ ದೂರು ದಾಖಲಿಸಿದ್ದಳು.ಮದ್ರಾಸ್ ಉಚ್ಚ ನ್ಯಾಯಾಲಯವು, ಭಾರತ ದಂಡ ಸಂಹಿತೆಯ 499 ನೇ ಪ್ರಕರಣದ ಮೂಲ ನ್ಯಾಯಿಕ ಅಗತ್ಯತೆಗಳೆಂದರೆ, ಆರೋಪಣೆಯನ್ನು ಮೂರನೇ ಪಕ್ಷಕಾರರಿಗೆ ತಿಳಿಯುವಂತೆ ಪ್ರತ್ಯಕ್ಷವಾಗಿ

ಮಾಡಿರಬೇಕು ಅಥವಾ ಮೂರನೇ ಪಕ್ಷಕಾರರಿಗೆ ತಿಳಿಯುವಂತೆ ಅದನ್ನು ಪ್ರಕಟಿಸಿರಬೇಕು ಎಂದು ಅಭಿಪ್ರಾಯಪಟ್ಟಿದೆ.ಆದರೆ, ಈ ಮೊಕದ್ದಮೆಯಲ್ಲಿ, ದೂರಿನಲ್ಲಿ ಮಾಡಲಾಗಿರುವ ಆಪಾದನೆಗಳ ಪ್ರಕಾರ ಕೂಡ ಅವುಗಳ ನ್ಯಾಯಾಲಯದ ಮುಂದೆ ಸಲ್ಲಿಸಲಾದ ವಾದಗಳಾಗಿದ್ದು, ಯಾರಿಗೂ ಮುಕ್ತವಾಗಿ ದೊರೆಯುವ ಸಾರ್ವಜನಿಕ ದಸ್ತಾವೇಜುಗಳಲ್ಲದಿರುವುದರಿಂದ, ಆಪಾದನೆಯನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪ್ರಕಟಿಸಲಾದವುಗಳೆಂಬುದಾಗಿ ಪರಿಗಣಿಸುವಂತಿಲ್ಲ.ಆದರೆ, ಮದ್ರಾಸ್ ಉಚ್ಚ ನ್ಯಾಯಾಲಯವು ಅದೇ ಚ ಮೊಕದ್ದಮೆಯಲ್ಲಿ ವಾದಗಳನ್ನು ನ್ಯಾಯಾಲಯದ ಸಿಬ್ಬಂದಿಯು ನಿರ್ವಹಿಸಿದ್ದರೂ ಸಹ ಹಾಗೂ ಪ್ರತಿಯನ್ನು ಅದರಲ್ಲಿನ ಪ್ರತಿವಾದಿಗೆ ಒದಗಿಸಿದರೂ ಅದನ್ನು ಪ್ರತಿವಾದಿಯು ಕೂಡ ಬಹಿರಂಗಪಡಿಸಬಹುದಾಗಿದ್ದರೂ, ಅವುಗಳು ಆಪಾದಿತರು ಪ್ರಕಟಿಸಿದಂತೆ ಆಗುವುದಿಲ್ಲ ಎಂಬುದಾಗಿ ಅಭಿಪ್ರಾಯಪಟ್ಟಿದೆ.

ಆಪಾದಿತರ ವಕೀಲರು, ಎಸ್. ನಾಗರಾಜ್ -ವಿರುದ್ಧ ಕೆ. ನಂದ ಕುಮಾರ್ ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಸಮನ್ವಯ ಪೀಠವು ನೀಡಿದ ತೀರ್ಪಿನ ಮೇಲೆ ಅವಲಂಬಿಸಿದ್ದು, ಅದರಲ್ಲಿ, ಈ ನ್ಯಾಯಾಲಯವು, ಮಾನಹಾನಿಯನ್ನು ಆರೋಪಿಸುವ ದೂರುದಾರನು ಮಾನಹಾನಿಕರ ವಿಷಯವು ಪ್ರಕಟಿತವಾಗಿದೆಯೆಂದು ಅಥವಾ ಅದನ್ನು ಅದು ಯಾರಿಗೆ ಉದ್ದೇಶಿಸಲಾಗಿದೆಯೋ ಆ ವ್ಯಕ್ತಿಯ ಹೊರತಾಗಿ ಇತರ ವ್ಯಕ್ತಿಗೆ ಅದನ್ನು ತಿಳಿಸಲಾಗಿದೆಯೆಂದು ಸಾಬೀತುಪಡಿಸುವುದು ಅವಶ್ಯಕವೆಂದು ಅಭಿಪ್ರಾಯಪಟ್ಟಿದೆ.ಅಲ್ಲದೆ, ಮಾನಹಾನಿ ಹೊಂದಿದ ವ್ಯಕ್ತಿಗೆ ಮಾನಹಾನಿಯ ವಿಷಯವನ್ನು ತಿಳಿಸುವುದು ' ಪ್ರಕಟಣೆ ' ಅಲ್ಲ ಹಾಗೂ ಸಂಬಂಧಿಸಿದ ವ್ಯಕ್ತಿಗೆ ಮಾನಹಾನಿ ಉಂಟುಮಾಡುವ ಉದ್ದೇಶದಿಂದ ಪ್ರಕಟಣೆಯನ್ನು ಬೇರೆಯವರಿಗೆ ಮಾಡಬೇಕು.ಮಾನಹಾನಿ ಹೊಂದಿದ ವ್ಯಕ್ತಿಗೆ ಪ್ರಕಟಣೆಯು ಅವಮಾನ ಆಗಬಹುದೇ ಹೊರತು ' ಮಾನಹಾನಿ ' ಅಲ್ಲ.

ಇದರಲ್ಲಿ ವರದಿಯಾದ ಚಿರಶ್ರೀ ದಾಸ್ ಗುಪ್ತ -ವಿರುದ್ಧ-ಅಮಿತಾಬ್ ದಾಸ್ ಬಿನ್ ದಿವಂಗತ ಪುಣ್ಯಾನಂದ್ ದಾಸ್ ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಮತ್ತೊಂದು ಸಮನ್ವಯ ಪೀಠದ ತೀರ್ಪಿನ ಮೇಲೆ ಸಹಾ ಆಪಾದಿತರ ವಕೀಲರು ಅವಲಂಬಿಸಿದ್ದು, ಅದರಲ್ಲಿ ಈ ನ್ಯಾಯಾಲಯವು ಮಾನಹಾನಿಕರ ವಿಷಯವನ್ನು2. ಲಾಸ್ (ಕರ್ನಾಟಕ) -2014-10-203. ಲಾಸ್ (ಕರ್ನಾಟಕ) 2018-8-304 ಯಾರಿಗೆ ಬರೆಯಲಾಗಿದೆಯೋ ಅವರ ಹೊರತಾಗಿ ಬೇರೊಬ್ಬ ವ್ಯಕ್ತಿಗೆ ಬರೆದ ನಂತರ ತಿಳಿಸಿದರೆ, ಅದರ ನ್ಯಾಯಯುತ ಅರ್ಥದಲ್ಲಿ ' ಪ್ರಕಟಣೆ'ಯಾಗುತ್ತದೆ.ಆದುದರಿಂದ ಮಾನಹಾನಿಕರ ವಿಷಯವನ್ನು ಯಾರಿಗೆ ಬರೆಯಲಾಗಿದೆಯೋ ಆ ವ್ಯಕ್ತಿಯ ಹೊರತಾಗಿ ಬೇರೊಬ್ಬ ವ್ಯಕ್ತಿಗೆ ತಿಳಿಸಿರಬೇಕು.ಸಂಬಂಧಿಸಿದ ವ್ಯಕ್ತಿಗೆ ಮಾನಹಾನಿಯ ವಿಷಯವನ್ನು ತಿಳಿಸುವುದಷ್ಟನ್ನೇ ಪ್ರಕಟಣೆ ಎಂದು ಹೇಳಲಾಗುವುದಿಲ್ಲ.

15. ಅಪರಾಧ ಪುನರೀಕ್ಷಣಾ ಅರ್ಜಿಸಂಖ್ಯೆ: 152/2014 ರಲ್ಲಿ ಪ್ರತಿವಾದಿ/ದೂರುದಾರರ ನ್ಯಾಯಾಲಯ ಸಲಹೆಗಾರರು (ಅಮಿಕಸ್ ಕ್ಯೂರಿ) ತಮ್ಮ ವಾದದಲ್ಲಿ, ನ್ಯಾಯಾಲಯದಲ್ಲಿ ದಾಖಲಿಸಿದ ವಾದಪತ್ರಗಳು ಮತ್ತು ನ್ಯಾಯಾಲಯದಲ್ಲಿ ನೀಡಿದ ಹೇಳಿಕೆ ವಿಶೇಷ ಹಕ್ಕುಳ್ಳದ್ದಲ್ಲವೆಂದು ವಾದಿಸಿದ್ದಾರೆ ಹಾಗೂ ಮುಂದುವರೆದು, ನ್ಯಾಯಾಲಯದಲ್ಲಿ ಸಲ್ಲಿಸಲಾದ ವಾದಪತ್ರವನ್ನು ಪ್ರಕಟಣೆಯಾಗುತ್ತದೆ ಎಂದು ಹೇಳಿ, ಅದಕ್ಕೆ ಬೆಂಬಲವಾಗಿ ಈ ಕೆಳಕಂಡ ಕೆಲವು ತೀರ್ಪುಗಳನ್ನು ಅವಲಂಬಿಸಿದ್ದಾರೆ.

ಶ್ರೀಮತಿ ಮಾಧುರಿ ಮುಕುಂದ್ ಚಿತ್ರೀಸ್ ವಿರುದ್ಧ-ಮುಕುಂದ್ ಮಾರ್ತಾಂಡ್ ಚಿತ್ರೀಸ್ ಮತ್ತು ಇತರರು ಮೊಕದ್ದಮೆಯಲ್ಲಿ ಬಾಂಬೆ ಉಚ್ಚ ನ್ಯಾಯಾಲಯವು, ನ್ಯಾಯಾಲಯದಲ್ಲಿ ದಾಖಲಿಸಿದ ವ್ಯವಹರಣೆಗಳಲ್ಲಿ ಚ ಮಾಡಲಾದ ಆರೋಪಣೆಯು ಸ್ಪಷ್ಟವಾಗಿಯೂ ಪ್ರಕಟಣೆಯಾಗುತ್ತದೆಂದು ಅಭಿಪ್ರಾಯಪಟ್ಟಿದೆ.ಮುಂದುವರೆದು, ಯಾರ ವಿರುದ್ಧ ಆರೋಪಣೆ ಮಾಡಲಾಗಿದೆಯೋ ಆ ವ್ಯಕ್ತಿಯ ಬಗ್ಗೆ ಪ್ರಾಧಿಕಾರಿಗೆ ಮಾಡಿದ ಪ್ರಕಟಣೆಯನ್ನೂ ಕೂಡ ಸಮರ್ಪಕ ಪ್ರಕಟಣೆ ಎಂದು ನಿರ್ಣಯಿಸಬೇಕಾಗಿದ್ದು, ಅದು ಭಾರತ ದಂಡ ಸಂಹಿತೆಯ 499 ನೇ ಪ್ರಕರಣದ ವ್ಯಾಪ್ತಿಯಲ್ಲಿ ಬರುತ್ತದೆ.

ಎಂ.ಕೆ. ಪ್ರಭಾಕರನ್ ಮತ್ತು ಇತರರು -ವಿರುದ್ಧ-ಟಿ.ಇ. ಗಂಗಾಧರನ್ ಮತ್ತು ಇತರರು ಮೊಕದ್ದಮೆಯಲ್ಲಿ ಕೇರಳ ಉಚ್ಚ ನ್ಯಾಯಾಲಯವು ನ್ಯಾಯಾಲಯದ ಮುಂದೆ ಸಲ್ಲಿಸಲಾದ ಲಿಖಿತ ಹೇಳಿಕೆಯಲ್ಲಿ ದೂರುದಾರರ ವಿರುದ್ಧ ಮಾನಹಾನಿಕರ ಹೇಳಿಕೆಗಳನ್ನು ಮಾಡಲಾಗಿದೆ ಎಂದು ಆಪಾದಿಸಲಾದ ವಿಷಯದಲ್ಲಿ ಕಾನೂನಿನ ನ್ಯಾಯಾಲಯದಲ್ಲಿ ಒಮ್ಮೆ ಹೇಳಿಕೆಯನ್ನು ದಾಖಲಾಯಿಸಿತೆಂದಲ್ಲಿ, ಆ ಹೇಳಿಕೆಯನ್ನು ಪ್ರಕಟಿಸಲಾದುದೆಂದು ಪರಿಗಣಿಸಬಹುದೆಂದು ಅಭಿಪ್ರಾಯಪಟ್ಟಿದೆ.ಅಂತಹ ಹೇಳಿಕೆಯಿಂದಲೇ ಮಾನಹಾನಿಕರವಾಗಿದೆ

ಎಂಬುದಾದಲ್ಲಿ, ಭಾರತ ದಂಡ ಸಂಹಿತೆಯ 499 ನೇ ಪ್ರಕರಣದ ಯಾವುದೇ ವಿನಾಯಿತಿಗಳ ಅಡಿಯಲ್ಲಿ ಅಂತಹ ಹೇಳಿಕೆಯನ್ನು ಮಾಡುವುದನ್ನು ಸಮರ್ಥನೀಯವೆಂದು ರುಜುವಾತುಪಡಿಸುವುದು ಆಪಾದಿತರ ಕರ್ತವ್ಯವಾಗಿದೆ.

ಸಂಜಯ್ ಮಿಶ್ರ ವಿರುದ್ಧ ಗವರಮೆಂಟ್ ಆಫ್ ಎನ್ಸಿಟಿ ಆಫ್ ಡೆಲ್ಲಿ ಮತ್ತು ಮತ್ತೊಬ್ಬರು ಮೊಕದ್ದಮೆಯಲ್ಲಿ, ದೆಹಲಿ ಉಚ್ಚ ನ್ಯಾಯಾಲಯವು ತನ್ನ ಚ ತೀರ್ಪಿನ 11 ಮತ್ತು 12 ನೇ ಕಂಡಿಕೆಗಳನ್ನು ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

“11. ಸಂದ್ಯಾಲ್ ವಿ. ಭಾಬಾ ಸುಂದರಿ ದೇಬಿ 7 ಐಎನ್ಡಿ.ಸಿಎಎಸ್ .803:15 ಸಿ.ಡಬ್ಲ್ಯು.ಎನ್.ನಲ್ಲಿ

995:14 ಸಿ.ಎಲ್.ಜೆ .31 ಮಾನ್ಯ ನ್ಯಾಯಮೂರ್ತಿಗಳು, ಔಗದರಾಮ್ ಶಾಹಾ ವಿ. ನೀವೊ ಚಾ ಂ ದ್ ಶಾಹ 23 ಸಿ .867; 12 ಐಎನ್ಡಿ.ಡಿಇಸಿ.(ಎನ್.ಎಸ್.) 576, ಈ ಮೊಕದ್ದಮೆಯನ್ನು ಅನುಸರಿಸಿ ಮಾನ್ಯ ನ್ಯಾಯಮೂರ್ತಿಗಳು, ನ್ಯಾಯಿಕ ನಡಾವಳಿಗಳಲ್ಲಿ ಪಕ್ಷಕಾರರ ಲಿಖಿತ ಹೇಳಿಕೆಯಲ್ಲಿ ಮಾಡಲಾದ ಮಾನಹಾನಿಕಾರಕ ಹೇಳಿಕೆಗಳು ಈ ದೇಶದಲ್ಲಿ ನಿಜವಾಗಿಯೂ ಮತ್ತು ಈ ಸಂಬಂಧದಲ್ಲಿನ ಅರ್ಹತಾ ವಿಶೇಷಾಧಿಕಾರವು, ಅದು ವಿಶೇಷ ಹಕ್ಕು ಹೊಂದಿಲ್ಲ ಹಾಗೂ ಭಾರತ ದಂಡ ಸಂಹಿತೆಯ 499 ನೇ ಪ್ರಕರಣದ ವಿನಾಯಿತಿಗಳ ಅಡಿಯಲ್ಲಿ ಬರದ ಹೊರತು ಅಂತಹ ಹೇಳಿಕೆಗಳ ಸಂಬಂಧದಲ್ಲಿ, ಕ್ಲೇಮು ಮಾಡುವಂತಿಲ್ಲ.ನಿರ್ವಿವಾದವಾಗಿಯೂ ಅರ್ಜಿದಾರರ ಮೊಕದ್ದಮೆಯು ಈ ಯಾವುದೇ ಅಪವಾದಗಳಲ್ಲಿ ಬರುವುದಿಲ್ಲ.

12. ಕ್ರಿಮಿನಲ್ ಉದ್ದೇಶಗಳಿಗಾಗಿ “ ಪ್ರಕಟಣೆ ” ಯು ಅದು ಮಾನಹಾನಿ ಹೊಂದಿದ ವ್ಯಕ್ತಿಗೆ ಮಾತ್ರ ತಿಳಿಸುವುದನ್ನು ಒಳಗೊಳ್ಳುವುದರಿಂದ ಅದು ಸಿವಿಲ್ ಕಾನೂನಿನಲ್ಲಿ ಹೊಂದಿರುವುದಕ್ಕಿಂತ ವಿಶಾಲ ಅರ್ಥ ಹೊಂದಿರುತ್ತದೆ.ಮಾನಹಾನಿಗೊಳಗಾದ ಮಾತ್ರ ಪ್ರಕಟಣೆಯಾಗಿದ್ದರೂ ಸಹ ಅದು ಒಳಗೊಂಡ ವ್ಯಕ್ತಿಗಳ ನಡುವೆ ಉಲ್ಲಂಘನೆಯನ್ನು ಪ್ರಚೋದಿಸುವ ಎಲ್ಲಾ ಸಾಧ್ಯತೆ ಇರುವುದರಿಂದ ಕ್ರಿಮಿನಲ್ ಮೊಕದ್ದಮೆಗಳಲ್ಲಿ ಅ ಮಾನಹಾನಿಗೆ ಪ್ರಾಸಿಕ್ಯೂಷನ್ ಮಾಡಬಹುದು " 9

ತಂಗವೇಲು ಚೆಟ್ಟಿಯಾರ್ –ವಿರುದ್ಧ ಪೊನ್ನಮ್ಮಾಳ್ ಮೊಕದ್ದಮೆಯಲ್ಲಿ ಮದ್ರಾಸ್ ಉಚ್ಚ ನ್ಯಾಯಾಲಯವು ವಾದಪತ್ರದಲ್ಲಿ ಒಳಗೊಂಡ ಮಾನಹಾನಿಕಾರಕದ್ದು, ನ್ಯಾಯಾಲಯದಲ್ಲಿ ಸಲ್ಲಿಸಿದುದರಿಂದ ಪ್ರಕಟವಾಯಿತು ಎಂಬುದರಲ್ಲಿ ಅನುಮಾನ ಇಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದೆ.

16. ಈ ಪ್ರಸ್ತುತ ಮೊಕದ್ದಮೆಯಲ್ಲಿ, ಆಪಾದಿತಳೇ ಸ್ಪಷ್ಟವಾದ ಮಾತುಗಳಲ್ಲಿ, ತಾನು ಹೇಳಿದಂತೆಯೇ ನಿಶಾನೆ.ಪಿ .4 ರಲ್ಲಿ ಇರುವಂತೆ ಕುಟುಂಬ ನ್ಯಾಯಾಲಯದಲ್ಲಿ ಆಕ್ಷೇಪಣೆಗಳ ಹೇಳಿಕೆಯನ್ನು ಸಲ್ಲಿಸಲಾಗಿದೆ ಎಂದು ಹೇಳಿದ್ದಾಳೆ ಹಾಗೂ ನಿಶಾನೆ ಪಿ .1 ರ ಪ್ರಕಾರ ಸದರಿ ಮೊಕದ್ದಮೆಯಲ್ಲಿ ಆಕೆಯು ಸಾಕ್ಷ್ಯ ನೀಡಿದ್ದಾಳೆ.ಎಣಿ

6. ಎಐಆರ್ 1966 ಮದ್ರಾಸ್ 363

ದೂರುದಾರರ ಪ್ರಕಾರ ಕೆಲವು ಮಾನಹಾನಿಕಾರಕ ಪದಗಳನ್ನು ಒಳಗೊಂಡಿವೆಯೆಂದು ಹೇಳಲಾದ ವಾದಪತ್ರವನ್ನು ಸಲ್ಲಿಸಿರುವುದೂ ಅಲ್ಲದೆ, ಆಕೆಯು ತನ್ನ ಹೇಳಿಕೆಯ ಒಳಾಂಶಗಳ ಬಗ್ಗೆ ಆತನ ಚಿಕ್ಕಪ್ಪ, ಚಿಕ್ಕಮ್ಮ ಹಾಗೂ ಸ್ನೇಹಿತರಿಗೂ ತಿಳಿಸಿರುತ್ತಾಳೆ.ಆಪಾದಿತರು ಡಿಡಬ್ಲ್ಯು.!ಆಗಿ ತಮ್ಮ ಸಾಕ್ಷ್ಯದಲ್ಲಿ, ತನ್ನ ಹೇಳಿಕೆಯ ಒಳಾಂಶಗಳ ಬಗ್ಗೆ ಯಾರ ಮುಂದೆಯೂ ಹೇಳಿಲ್ಲವೆಂದು ತಿಳಿಸಿದ್ದರೂ, ಆಕೆಯ ಹೇಳಿಕೆಯ ಒಳಾಂಶಗಳನ್ನು ಆತನ ಬಂಧುಗಳು ಹಾಗೂ ಸ್ನೇಹಿತರಿಗೆ ಬಹಿರಂಗ ಪಡಿಸಲಾಗಿದೆಯೆಂಬ ಡಿ.ಡಬ್ಲ್ಯೂ .1 ರವರ ಸಾಕ್ಷ್ಯವನ್ನು ಅವರ ಪಾಟಿ ಸವಾಲಿನಲ್ಲಿ ಅಲ್ಲಗಳೆದಿಲ್ಲ.ಅದರ ಬದಲು ಸದರಿ ಹೇಳಿಕೆಯನ್ನು ಪ್ರಾ.ಸಾ .1 ರ ಪಾಟೀ ಸವಾಲಿನಲ್ಲಿ ಆಪಾದಿತಳೇ ಹೊರತೆಗೆದಿದ್ದಾರೆ.ಆದುದರಿಂದ, ವೈವಾಹಿಕ ಮೊಕದ್ದಮೆಯಲ್ಲಿ, ಆಕ್ಷೇಪಣೆಗಳ ಹೇಳಿಕೆಗಳ ರೂಪದಲ್ಲಿ ನಿಶಾನೆ.ಪಿ .4 ರ ಪ್ರಕಾರ ಹೇಳಿಕೆಗಳನ್ನು ದಾಖಲಿಸಿರುವುದೂ ಅಲ್ಲದೆ ಅದರ ಒಳಾಂಶಗಳನ್ನು ದೂರುದಾರರ ಸಂಬಂಧಗಳಿಗೆ ಹಾಗೂ ಸ್ನೇಹಿತನಿಗೆ ಬಹಿರಂಗಪಡಿಸಿದ್ದಾಳೆ.ಅದು ಆಪಾದಿತರಿಂದ ಆಪಾದಿತ ಮಾನಹಾನಿಕಾರಕ ಹೇಳಿಕೆಯ ಭಾರತ ದಂಡ ಸಂಹಿತೆಯ 499 ನೇ ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಿರುವಂತೆ ಪ್ರಕಟಣೆ ಆಗಿದೆಯೆಂಬುದನ್ನು ಸ್ಪಷ್ಟವಾಗಿ ರುಜುವಾತುಪಡಿಸುತ್ತದೆ.

17. ಮುಂದಿನ ಪ್ರಶ್ನೆ ನಿಶಾನೆ.ಪಿ.4 ರ ಆಕ್ಷೇಪಣೆಗಳ ಹೇಳಿಕೆಯಲ್ಲಿ ಆಪಾದಿತ ಹೇಳಿಕೆಗಳು ಮಾನಹಾನಿಕರವಾಗಿವೆಯೇ ಎಂಬುದಾಗಿರುತ್ತದೆ.

ಸದರಿ ಅಂಶದ ಮೇಲೆ ಆಪಾದಿತರ ಮಾನ್ಯ ವಕೀಲರು ವಿರೋಧಿಸಲಿಲ್ಲ.

ನಿಶಾನೆ.ಪಿ .4 ನ್ನು ಓದಿದಲ್ಲಿ ಸದರಿ ಆಪಾದಿತರು, ಆಗ ದೂರುದಾರರ ಪತ್ನಿಯಾಗಿ ತನ್ನ ಸದರಿ ಆಕ್ಷೇಪಣೆಗಳ ಹೇಳಿಕೆಯಲ್ಲಿ ಕನ್ನಡ ಭಾಷೆಯಲ್ಲಿ ಕೆಲವು ಹೇಳಿಕೆಗಳನ್ನು ನೀಡಿರುವುದು ಕಂಡುಬಂದಿದ್ದು, ಅದರ ಇಂಗ್ಲಿಷ್ ಭಾಷೆಯ ಭಾಷಾಂತರವು ಈ ಮುಂದಿನಂತಿದೆ:

66 " ದೂರುದಾರರಿಗೆ ಆತನ ಮಗಳ ಹೆಸರು ಗೊತ್ತಿಲ್ಲ.ಈ ಅಂಶದಿಂದ ದೂರುದಾರರು ಮೊದಲನೇ ಪ್ರತಿವಾದಿ ಹಾಗೂ ಹೆಣ್ಣು ಮಗುವಿನ ಜೊತೆಯಲ್ಲಿ ಎಷ್ಟರಮಟ್ಟಿಗೆ ಸಂಬಂಧ ಹೊಂದಿದ್ದರೆಂಬುದನ್ನು ಸ್ಪಷ್ಟವಾಗಿ ರುಜುವಾತಾಗುತ್ತದೆ."

66 " ದೂರುದಾರರು ಮದ್ಯವ್ಯಸನಿಯಾಗಿದ್ದು, ಕೊಠಡಿಯಲ್ಲಿ ಯಾರೂ ಇರುತ್ತಿಲ್ಲದಿದ್ದರಿಂದ ನಗ್ನವಾಗಿ ನೃತ್ಯ ಮಾಡುವಂತೆ ಮೊದಲನೇ ಪ್ರತಿವಾದಿಗೆ ಚಿತ್ರಹಿಂಸೆ ಕೊಡುತ್ತಿದ್ದರು ಹಾಗೂ ಆಕೆಯು ಹಾಗೆ ಮಾಡದಿದ್ದಾಗ, ದೈಹಿಕ ಹಾಗೂ ಮಾನಸಿಕ ಚಿತ್ರಹಿಂಸೆ ಕೊಡುತ್ತಿದ್ದರು.

" ದೂರುದಾರರು ತಮ್ಮ ಮನಸೋಇಚ್ಛೆ ನಡೆದುಕೊಳ್ಳುವ ಪ್ರವೃತ್ತಿ ಬೆಳೆಸಿಕೊಂಡಿದ್ದರು.ಆಕೆಗೆ ಗೊತ್ತಿಲ್ಲದ ಕೆಲವು ವ್ಯಕ್ತಿಗಳನ್ನು ಕರೆದುಕೊಂಡು ಬಂದು, ಅವರೊಂದಿಗೆ ದೈಹಿಕ ಸಂಬಂಧ ಬೆಳೆಸಿ, ಹಣ ಸಂಪಾದಿಸುವಂತೆ ಒತ್ತಾಯಿಸುತ್ತಿದ್ದರು.

" ಮೊದಲನೇ ಪ್ರತಿವಾದಿಯು ಮೂರನೇ ವ್ಯಕ್ತಿಗಳೊಂದಿಗೆ ಅನೈತಿಕ ಸಂಬಂಧ ಬೆಳೆಸಿ ಹಣ ಸಂಪಾದಿಸಲು ನಿರಾಕರಿಸಿರುವುದರಿಂದ, ದೂರುದಾರರು ಆಕೆಗೆ ಹಲವಾರು ಬಾರಿ ಹೊಡೆದಿದ್ದಾರೆ ಹಾಗೂ ಕತ್ತುಹಿಸುಕಿ ತಮ್ಮ ಮಗಳನ್ನು ಸಾಯಿಸಲು ಸಹ ಪ್ರಯತ್ನಿಸಿದ್ದಾರೆ."

18. ಆಪಾದಿತರ ಹೇಳಿಕೆಗಳ ಒಳಾಂಶಗಳ ಮೇಲಿನ ಪುನರುಚ್ಚರಿಸುವಿಕೆಯ ಸದರಿ ಹೇಳಿಕೆಗಳು, ಭಾರತ ದಂಡ ಸಂಹಿತೆಯ 499 ನೇ ಪ್ರಕರಣದ ಅಪವಾದಗಳಲ್ಲಿ ಯಾವುದಾದರು ಒಂದರಲ್ಲಿ ಬರುತ್ತದೆಂದು ತೋರಿಸದ ಹೊರತು ಸದರಿ ಹೇಳಿಕೆಗಳು ಮಾನಹಾನಿಕಾರಕವಾದವುಗಳೆಂದು ಅದರಿಂದಲೇ ಹೇಳಬಹುದಾಗಿದೆ.

19. ಆಪಾದಿತರ ಮಾನ್ಯ ವಕೀಲರು ತಮ್ಮ ವಾದದಲ್ಲಿ ಆಪಾದಿತರು ಮಾಡಿದ ಹೇಳಿಕೆಗಳು ಅದರಿಂದಾಗಿಯೇ ಮಾನಹಾನಿಕಾರಕವೆಂದು ಕಂಡುಬಂದರೂ ಅವುಗಳನ್ನು

ಆಪಾದಿತರು ಸದ್ಭಾವನೆಯಿಂದ ಮಾಡಿರುವುದರಿಂದ, ಭಾರತ ದಂಡ ಸಂಹಿತೆಯ 499 ನೇ ಪ್ರಕರಣ ಅಪವಾದದ ಅಡಿಯಲ್ಲಿ ಬರುತ್ತವೆಂದು ವಾದಿಸಿದರು.

ತಮ್ಮ ಬೆಂಬಲಕ್ಕೆ ಅವರು ಭೀಮನಗೌಡ ಮಲ್ಲನಗೌಡ ವಿರುದ್ಧ ಮಲ್ಲೇಶಪ್ಪ ಬಸಪ್ಪ 7 " ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠದ ತೀರ್ಪಿನ ಮೇಲೆ ಅವಲಂಬಿಸಿದ್ದು, ಅದರಲ್ಲಿ ಮೂಲ ದಾವೆಯಲ್ಲಿ ವಿಚಾರಣಾವಧಿಯ ಅರ್ಜಿಯ ಬೆಂಬಲವಾಗಿ 1 ನೇ ಆಪಾದಿತರು ನಿಶಾನೆ ಪಿ .1 (  ಎ) ಮೂಲಕ ಸಲ್ಲಿಸಲಾದ ಅಫಿಡಾವಿಟ್ನಲ್ಲಿ ದೂರುದಾರರು ಆತನನ್ನು ರೌಡಿ ರೀತಿಯ ಮನುಷ್ಯ ಹಾಗೂ ಜೈಲಿನಿಂದ ಹೊರಬಂದವನು ಎಂಬ ಪದಗಳನ್ನು ಬಳಸಿ, ಆಪಾದಿಸಿ, ಆತನ ಮಾನಹಾನಿ ಮಾಡಿದ್ದಾನೆ.ಆಪಾದಿತರು ಆಫಿಡವಿಟ್ನಲ್ಲಿ ನಿಶಾನೆ ಪಿ .2 ರ ಪ್ರಕಾರ ಅಂತಹುದೇ ಮತ್ತೊಂದು ದಸ್ತಾವೇಜನ್ನು ಸಲ್ಲಿಸಿರುವುದನ್ನು ಒಪ್ಪಿಕೊಂಡಿದ್ದಾರೆ.ಆದರೆ ಆ ಅಭಿವ್ಯಕ್ತಿಗಳನ್ನು ಸದ್ಭಾವನೆಯಿಂದ ಹಾಗೂ ಅವರದೇ ಹಿತಾಸಕ್ತಿಯಿಂದ ಮಾಡಿದ್ದುದಾಗಿ ವಿವರಿಸಿದ್ದಾರೆ.ದಂಡಾಧಿಕಾರಿಯವರು ಭಾರತ ದಂಡ ಸಂಹಿತೆಯ 499 ನೇ ಪ್ರಕರಣದ ಒಂಭತ್ತನೇ ಅಪವಾದದ ಅಂಶಗಳನ್ನು ರುಜುವಾತುಪಡಿಸಿಲ್ಲವೆಂದು, ಹಾಗಾಗಿ ಅವರು ಮಾನಹಾನಿ ಅಪರಾಧದ ತಪ್ಪಿತಸ್ಥರೆಂದು ನಿರ್ಣಯಿಸಿದ್ದಾರೆ.ಸತ್ರ ನ್ಯಾಯಾಧೀಶರು ಅದಕ್ಕೆ ವಿರುದ್ಧ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.ದೂರುದಾರರು ಸಲ್ಲಿಸಿದ ಮೇಲ್ಮನವಿಯಲ್ಲಿ, ವಿಭಾಗೀಯ ಪೀಠವು ಭಾರತ ದಂಡ ಸಂಹಿತೆ 52 ನೇ ಪ್ರಕರಣದ ಅಡಿಯಲ್ಲಿ, ಯುಕ್ತ ಎಚ್ಚರಿಕೆ ಇಲ್ಲದೆ ಹಾಗೂ ಗಮನಹರಿಸದೆ ಮಾಡಿದ ಅಥವಾ ನಂಬಿದ " ಸದ್ಭಾವನೆಯಿಂದ ಮಾಡಲಾದುದು ಅಥವಾ ನಂಬಲಾದುದು ಎಂದು ಹೇಳಲಾಗುವುದಿಲ್ಲ ಎಂಬುದಾಗಿ ಅಭಿಪ್ರಾಯಪಟ್ಟಿದೆ.ತನ್ನ

ಮುಂದೆ ಇರುವ ಅಂಶಗಳನ್ನು ವಿಶ್ಲೇಷಿಸುತ್ತಾ, ನ್ಯಾಯಾಲಯವು, ನಿಶಾನೆ ಪಿ .2 ರಲ್ಲಿನ ವಾದಪತ್ರವನ್ನು ಆಪಾದಿತರ ಮಾತೃಭಾಷೆಯಲ್ಲದ ಭಾಷೆಯಲ್ಲಿ ಸಂಬಂಧಪಟ್ಟ ವಕೀಲರು ಸಿದ್ಧಪಡಿಸಿದ್ದಾರೆಂದು ಅಭಿಪ್ರಾಯಪಟ್ಟಿದೆ.ಸೂಚನೆಯ ಆಧಾರದಲ್ಲಿ ಆಪಾದಿತರು ತಿಳಿಸಿದ ಪದಗಳನ್ನು ವಕೀಲರು ಲಿಪ್ಯಂತರ ಮಾಡಿದ್ದಾರೆ.

ಆದರೂ ಆಪಾದಿತರು ವಕೀಲರ ಕಾನೂನು ಸಲಹೆ ಪಡೆದುಕೊಂಡಿದ್ದಾರೆ.ಇದರೊಂದಿಗೆ, ನ್ಯಾಯಾಲಯವು ಅಂತಹ ಅಭಿವ್ಯಕ್ತಿಗಳನ್ನು ಬಳಸುವುದಕ್ಕೆ ಮೊದಲು ಅನುಭವಿ ವಕೀಲರನ್ನು ಸಮಾಲೋಚಿಸುವುದು ಭಾರತ ದಂಡ ಸಂಹಿತೆಯ 52 ನೇ ಪ್ರಕರಣದ ಅಂಶಗಳ ಪಾಲನೆಗೆ ಸಾಕಷ್ಟಾಗುತ್ತದೆಯೆಂದು ತೀರ್ಪು ನೀಡಿದೆ.ಆದರೂ, ವಕೀಲರನ್ನು ಆಪಾದಿತರನ್ನಾಗಿ ಮಾಡದೆ ಅಥವಾ ಪ್ರಾಸಿಕ್ಯೂಷನ್ ಸಾಕ್ಷಿಯಾಗಿ ವಿಚಾರಣೆ ಮಾಡದೆ, ಕೆಲವು ಲೋಪಗಳನ್ನು ಹಾಗೂ ದೂರುದಾರರಿಂದ ಕೆಲವು ಅಂತಹುದೇ ಲೋಪಗಳನ್ನು ಮಾಡಲಾಗಿದೆಯೆಂದು ಅಭಿಪ್ರಾಯಪಟ್ಟಿದೆ.ಇದರೊಂದಿಗೆ, ಅದರ ಮುಂದೆ ಇರುವ ಸಾಕ್ಷ್ಯಾಧಾರಗಳು ಆಪಾದಿತರ ಪರವಾಗಿ ಯುಕ್ತ ಸಂಭಾವ್ಯತೆಯ ಅಂಶಗಳನ್ನು ಒದಗಿಸಲು ಸಾಕಷ್ಟಾಗುತ್ತದೆ ಎಂದು ಅಭಿಪ್ರಾಯಪಡಿಸಿ ಅದರಂತೆ ದೂರುದಾರರಿಂದ ಸಲ್ಲಿಸಲಾದ ಮೇಲ್ಮನವಿಯನ್ನು ವಜಾ ಮಾಡಿದೆ.

20. ಈ ಮೊಕದ್ದಮೆಯಲ್ಲಿ, ಮಾನಹಾನಿಕಾರಕವೆಂದು ಪ್ರಶ್ನಿಸಲಾಗಿರುವ ನಿಶಾನೆ.ಪಿ .4 ರಲ್ಲಿ ಆಪಾದಿತರಿಂದ ಮಾಡಲಾದ ಹೇಳಿಕೆಗಳನ್ನು ಸದ್ಭಾವನೆಯಿಂದ ಮಾಡಲಾದವುಗಳೆಂದು, ಆದ್ದರಿಂದ ಅವು ಭಾರತ ದಂಡ ಸಂಹಿತೆಯ 499 ನೇ ಪ್ರಕರಣದ ಒಂಭತ್ತನೇ ಅಪವಾದದ ಅಡಿಯಲ್ಲಿ ಬರುತ್ತವೆಂದು ಹೇಳಲು ಈ ಹೇಳಿಕೆಗಳನ್ನು ಯುಕ್ತ ಎಚ್ಚರಿಕೆ ಹಾಗೂ ಗಮನ ನೀಡಿ, ಮಾಡಲಾಗಿದೆಯೆಂದು ಆಕೆಯು ತೋರಿಸಬೇಕು.ಆದರೆ, ಆಕೆಯು ಡಿ.ಡಬ್ಲ್ಯು .1 ಆಗಿ ಆಕೆಯ ಪಾಟೀ-ಸವಾಲಿನಲ್ಲಿ ಒಂದಕ್ಕಿಂತ ಹೆಚ್ಚು ಸ್ಥಳದಲ್ಲಿ ಹೇಳಿರುವ ಅವರದೇ ಹೇಳಿಕೆಯಲ್ಲಿ ಆಕೆಯು, ತನ್ನ ಆಕ್ಷೇಪಣೆಗಳ ಹೇಳಿಕೆಯಲ್ಲಿ ಹೇಳಿರುವುದು ವಾಸ್ತವಾಂಶಗಳು ಹಾಗೂ ಅವು ತನ್ನ ಹಾಗೂ ತನ್ನ ಪತಿಯ ಅಂದರೆ ದೂರುದಾರರ ನಡುವೆ ನಡೆದ ಘಟನೆಗಳಾಗಿವೆಯೆಂದು ಹೇಳಿದ್ದಾರೆ.ಆಕೆಯ ಮುಂದುವರೆದ ಪಾಟೀ ಸವಾಲಿನಲ್ಲಿಯೂ ಸಹಾ ಅವುಗಳು ನಿಜವೆಂದು ಅವರು ಪುನರುಚ್ಚರಿಸಿದ್ದಾರೆ.ಹಾಗಾಗಿ ಅವು ವಾಸ್ತವಾಂಶಗಳೆಂದು ಹೇಳಿದ್ದಾರೆ.ಆದುದರಿಂದ ಆಪಾದಿತರ ವಕೀಲರು ಆಕೆಯು ಅವುಗಳನ್ನು ಸದ್ಭಾವನೆಯಿಂದ ಮಾಡಿದ್ದಾರೆಂದು ವಾದಿಸಿದರೂ ಸಹಾ, ಆಪಾದಿತರ ಪ್ರಕಾರ ಅವು ನಿಜವಾದವುಗಳಾಗಿವೆ.ಅವುಗಳು ನಿಜವಾಗಿದ್ದು, ಭಾರತ ದಂಡ ಸಂಹಿತೆಯ 499 ನೇ ಪ್ರಕರಣದ ಮೊದಲನೇ ಅಪವಾದದ ಅಡಿಯಲ್ಲಿ ಬರುವುದಾದರೆ, ಅವುಗಳು ನಿಜವಾದವುಗಳೆಂಬುದಾಗಿ ಅವರೇ ರುಜುವಾತು ಪಡಿಸಬೇಕು.

ಒಪ್ಪಿಕೊಂಡಿರುವಂತೆಯೇ ಅವರ ನಿಶಾನೆ.ಪಿ .4 ರ ಆಕ್ಷೇಪಣೆಗಳ ಹೇಳಿಕೆಯಲ್ಲಿ ಅವರು ಮಾಡಿರುವಂತಹ ಹೇಳಿಕೆಗಳನ್ನು ಹಾಗೂ ನಿಶಾನೆ ಪಿ .1 ರಲ್ಲಿ ಅವನ್ನು ಪುನರುಚ್ಚರಿಸಿರುವುದರ ಹೊರತಾಗಿ, ಅವು ನಿಜದ ಆರೋಪಗಳಾಗಿದ್ದವೆಂದು ಅಥವಾ ಅವುಗಳನ್ನು ಸದ್ಭಾವನೆಯಿಂದ ಮಾಡಲಾಗಿದೆಯೆಂದು ತೋರಿಸಲು ಪ್ರಯತ್ನವನ್ನೇ ಮಾಡಿಲ್ಲ.ಆದುದರಿಂದ ದೂರುದಾರರು, ಆಪಾದಿತರು ಭಾರತ ದಂಡ ಸಂಹಿತೆಯ 500 ನೇ ಪ್ರಕರಣದ ಅಡಿಯಲ್ಲಿ ಶಿಕ್ಷಾರ್ಹವಾಗಿರುವ ಭಾರತ ದಂಡ ಸಂಹಿತೆಯ 499 ನೇ ಪ್ರಕರಣದ ಅಡಿಯಲ್ಲಿ ಶಿಕ್ಷಾರ್ಹವಾದ ಮಾನಹಾನಿ ಅಪರಾಧವನ್ನು ಎಸಗಿದ್ದರೆಂದು ಸಂಶಯಾತೀತವಾಗಿ ರುಜುವಾತುಪಡಿಸಿದ್ದಾರೆಂದು ಸುರಕ್ಷಿತವಾಗಿ ಹೇಳಬಹುದಾಗಿದೆ.

21. ಆಪಾದಿತರು ಭಾರತ ದಂಡ ಸಂಹಿತೆಯ 500 ನೇ ಪ್ರಕರಣದ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧದ ತಪ್ಪಿತಸ್ಥರೆಂದು ಅಧಿವಿಚಾರಣಾ ನ್ಯಾಯಾಲಯ ಹಾಗೆಯೇ ತ್ವರಿತ ನ್ಯಾಯಾಲಯ ಒಂದೇ ರೀತಿಯ ತೀರ್ಪು ನೀಡಿರುವುದರಿಂದ, ಅವರುಗಳ ಪ್ರಶ್ನಿತ ತೀರ್ಪುಗಳಲ್ಲಿ ಮಧ್ಯಪ್ರವೇಶಿಸಲು ನನಗೆ ಯಾವುದೇ ಕಾರಣ ಕಾಣುತ್ತಿಲ್ಲ.

22. ಎರಡನೇ ಅಂಶವು, ಭಾರತ ದಂಡ ಸಂಹಿತೆಯ 500 ನೇ ಪ್ರಕರಣದ ಅಡಿಯಲ್ಲಿ ಶಿಕ್ಷಾರ್ಹವಾದ ಆಪಾದಿತರ ರುಜುವಾತಾದ ತಪ್ಪಿಗೆ ಅಧಿವಿಚಾರಣಾ ನ್ಯಾಯಾಲಯದಿಂದ ಆದೇಶಿಸಿರುವ ಸೆರೆವಾಸದ ಪ್ರಮಾಣದ ಕುರಿತಾಗಿದೆ.

ಭಾರತ ದಂಡ ಸಂಹಿತೆಯ 500 ನೇ ಪ್ರಕರಣದ ಅಡಿಯಲ್ಲಿ ಮಾನಹಾನಿಗೆ ಗೊತ್ತುಪಡಿಸಲಾದ ಶಿಕ್ಷೆಯು, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಸೆರೆವಾಸ ಅಥವಾ ದಂಡದೊಂದಿಗೆ ಅಥವಾ ಎರಡನ್ನೂ ಒಳಗೊಂಡಿರುತ್ತದೆ.

ಅಧಿವಿಚಾರಣಾ ನ್ಯಾಯಾಲಯವು, ಒಂದು ತಿಂಗಳ ಸಾದಾ ಸೆರೆವಾಸ ಅನುಭವಿಸುವ ಹಾಗೂ ರೂ .5,000/- ದಂಡ ನೀಡುವ ಶಿಕ್ಷೆ ವಿಧಿಸಿದೆ.ಅಪರಾಧ ಪುನರೀಕ್ಷಣಾ ಅರ್ಜಿಸಂಖ್ಯೆ: 1358/2010 ರಲ್ಲಿನ ಪುನರೀಕ್ಷಣಾ ಅರ್ಜಿದಾರರು ಸದರಿ ಶಿಕ್ಷೆಯ ಪ್ರಮಾಣವನ್ನು ಇನ್ನೂ ಗರಿಷ್ಠ ಪ್ರಮಾಣಕ್ಕೆ ಹೆಚ್ಚಿಸಲು ಕೋರಿದ್ದಾರೆ.

ಅಪರಾಧ ಪುನರೀಕ್ಷಣಾ ಅರ್ಜಿಸಂಖ್ಯೆ: 1358/2010 ರಲ್ಲಿನ ಪುನರೀಕ್ಷಣಾ ಅರ್ಜಿದಾರರ ವಕೀಲರು ತಮ್ಮ ವಾದದಲ್ಲಿ ದುಡುಕಿನಿಂದ ಹಾಗೂ ಉದ್ದೇಶಪೂರ್ವಕವಾಗಿ ಅರ್ಜಿದಾರರ ಗೌರವಕ್ಕೆ ಚ್ಯುತಿ ತಂದಿರುವಂತಹ ಮಾನಹಾನಿಕಾರಕ ಹೇಳಿಕೆ ನೀಡಿರುವ ಆಪಾದಿತರಿಗೆ ವಾಸ್ತವ ಸಂಗತಿ ಹಾಗೂ ಸನ್ನಿವೇಶಗಳನ್ನು ಪರಿಗಣಿಸಿ, ಗರಿಷ್ಠ ಶಿಕ್ಷೆ ನೀಡಬೇಕೆಂದು ನಿವೇದಿಸಿಕೊಂಡಿದ್ದಾರೆ.

ಇದಕ್ಕೆ ತದ್ವಿರುದ್ಧವಾಗಿ, ಆಪಾದಿತರ ಮಾನ್ಯ ವಕೀಲರು ತಮ್ಮ ವಾದದಲ್ಲಿ, ಆಪಾದಿತ ಅಪರಾಧದಲ್ಲಿ ಆಪಾದಿತರು ತಪ್ಪಿತಸ್ಥರೆಂದು ನ್ಯಾಯಾಲಯವು ನಿರ್ಣಯಕ್ಕೆ ಬಂದಲ್ಲಿ, ಆಗ ಮೊಕದ್ದಮೆಯ ಸಂಗತಿಗಳು ಹಾಗೂ ಸನ್ನಿವೇಶಗಳನ್ನು ಹಾಗೂ ಆಗ ಆಪಾದಿತರು ದೂರುದಾರರ ಪತ್ನಿಯಾಗಿದ್ದರೆಂಬುದನ್ನು ಹಾಗೂ ಆಕೆಯು ಅಪ್ರಾಪ್ತವಯಸ್ಕ ಮಗಳನ್ನು ನೋಡಿಕೊಳ್ಳಬೇಕಾಗಿದೆಯೆಂಬುದನ್ನು ಹಾಗೂ ಸಮಾಜದಲ್ಲಿ ಆಕೆಯ ಗೌರವವನ್ನು ಪರಿಗಣಿಸಿ, ಸೆರೆವಾಸದ ಶಿಕ್ಷೆಯನ್ನು ರದ್ದುಪಡಿಸಬೇಕೆಂದು ಕೋರಿದ್ದಾರೆ.

23, ಸೆರೆವಾಸದ ನೀತಿ ಏನೆಂದರೆ, ನೀಡಲಾದ ಶಿಕ್ಷೆಯು ನಾಮಮಾತ್ರ ವಾಗಿರಲೂಬಾರದು ಅಥವಾ ತುಂಬಾ ಹೆಚ್ಚಾಗಿರಲೂಬಾರದು ಎಂಬುದಾಗಿರುತ್ತದೆ. ಅದು ರುಜುವಾತಾದ ತಪ್ಪಿನ ತೀವ್ರತೆಗೆ ಅನುಸಾರವಾಗಿರಬೇಕು.ಸದರಿ ಪ್ರಮಾಣವನ್ನು ನಿರ್ಧರಿಸಲು ಮೊಕದ್ದಮೆಯ ವಾಸ್ತವಾಂಶಗಳು ಹಾಗೂ ಪರಿಸ್ಥಿತಿಗಳು ಹಾಗೂ ನ್ಯಾಯಾಲಯದ ಮುಂದೆ ಇರುವ ಮೊಕದ್ದಮೆಗೆ ವಿಶಿಷ್ಟವಾಗಿರುವಂತಹ ಇತರ ಯಾವುದೇ ಪರಿಸ್ಥಿತಿಗಳು ಇವುಗಳೆಲ್ಲವನ್ನು ಪರಿಗಣಿಸಬೇಕಾಗುತ್ತದೆ.

ಒಪ್ಪಿಕೊಂಡಿರುವಂತೆ, ಪ್ರಸ್ತುತ ಮೊಕದ್ದಮೆಯಲ್ಲಿ, ಕುಟುಂಬ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದಾಗ, ಆಪಾದಿತರು 27 ವರ್ಷ ವಯಸ್ಸಿನ ಚಿಕ್ಕ ವಯಸ್ಸಿನ ಮಹಿಳೆಯಾಗಿದ್ದು, ಎರಡೂವರೆ ವರ್ಷ ವಯಸ್ಸಿನ ಅಪ್ರಾಪ್ತ ವಯಸ್ಕ ಮಗಳನ್ನು ಹೊಂದಿದ್ದು, ಈಗ ಆ ಮಗಳು ಬೆಳೆದು ನಿಂತಿರಬಹುದು.ಆಪಾದಿತರ ಪರ ವಕೀಲರ ಪ್ರಕಾರ, ಆಪಾದಿರು ಒಬ್ಬ ತಾಯಿಯಾಗಿ, ಇನ್ನೂ ಬಾಲಕಿಯ ಪಾಲನೆ ಮಾಡಬೇಕಾಗಿದ್ದು, ಆಕೆಯನ್ನು ಜೀವನದಲ್ಲಿ ನೆಲೆಯಾಗಿಸಬೇಕಾಗಿದೆ.ಅಲ್ಲದೆ, ಆಪಾದಿತ ಬಾಧಿತ ವ್ಯಕ್ತಿಯು ಆಪಾದಿತರ ಪತಿ ಹಾಗೂ ಅಪ್ರಾಪ್ತ ಮಗಳ ತಂದೆಯೂ ಆಗಿದ್ದಾರೆ.

ಮೊಕದ್ದಮೆಯ ಇಂತಹ ವಿಶೇಷ ಪರಿಸ್ಥಿತಿಗಳಲ್ಲಿ ನನ್ನ ಅಭಿಪ್ರಾಯವೇನೆಂದರೆ, ಎಷ್ಟೇ ಕಡಿಮೆ ಅವಧಿಯದಾಗಿರಲಿ ಆಪಾದಿತರನ್ನು ಸೆರೆವಾಸ ಅನುಭವಿಸಲು ಕಳುಹಿಸಿದಲ್ಲಿ ಅದು ಆಕೆಯ ಹಾಗೆಯೇ ಆಕೆಯ ಮಗಳ ಭವಿಷ್ಯದ ಮೇಲೆ ತೀವ್ರ ಪರಿಣಾಮ ಉಂಟಾಗುತ್ತದೆ.ಅದಕ್ಕೆ ಬದಲಾಗಿ ಭಾರತ ದಂಡ ಸಂಹಿತೆಯ 499 ನೇ ಪ್ರಕರಣವು ದಂಡವನ್ನು ಮಾತ್ರ ವಿಧಿಸುವ ವಿವೇಚನೆ ನೀಡಿರುವುದರಿಂದ, ಅಧಿವಿಚಾರಣಾ ನ್ಯಾಯಾಲಯವು ವಿಧಿಸಿರುವ ದಂಡದ ಪ್ರಮಾಣವನ್ನು ಹೆಚ್ಚಿಸಬಹುದಾಗಿದೆ.

24. ತದನುಸಾರವಾಗಿ, ನಾನು ಈ ಮುಂದಿನಂತೆ ಆದೇಶಿಸಿರುತ್ತೇನೆ.

## ಆದೇಶ

[i] ಕ್ರಿಮಿನಲ್ ಪುನರೀಕ್ಷಣಾ ಅರ್ಜಿಸಂಖ್ಯೆ: 152/2014 ನ್ನು ಭಾಗಶಃ ಪುರಸ್ಕರಿಸಲಾಗಿದೆ;

ಆಪಾದಿತರಾದ ಶ್ರೀಮತಿ ಸುಷ್ಮಾರಾಣಿಯವರನ್ನು ಅಪರಾಧಿಯೆಂದು ನಿರ್ಣಯಿಸಿ, ಭಾರತ ದಂಡ ಸಂಹಿತೆ, 1860 ರ 500 ನೇ ಪ್ರಕರಣದ ಅಡಿಯಲ್ಲಿ ಶಿಕ್ಷಿಸಬಹುದಾದ ಅಪರಾಧದ ತಪ್ಪಿತಸ್ಥರೆಂದು ನಿರ್ಣಯಿಸಿ ಸಿ.ಸಿ.ಸಂಖ್ಯೆ:11445/2006 ರಲ್ಲಿದಿನಾಂಕ: 25.10.2010 ರಂದು VI ನೇ ಹೆಚ್ಚುವರಿ ಮುಖ್ಯ ಮಹಾನಗರ ದಂಡಾಧಿಕಾರಿ, ಬೆಂಗಳೂರು ನಗರ, ಇವರು ಹೊರಡಿಸಿದ ಅಪರಾಧ ನಿರ್ಣಯ ತೀರ್ಪನ್ನು ಹಾಗೂ ಕ್ರಿಮಿನಲ್

ಮೇಲ್ಮನವಿಸಂಖ್ಯೆ: 815/2010 ರಲ್ಲಿ ಹೆಚ್ಚುವರಿ ಸತ್ರ ನ್ಯಾಯಾಧೀಶರು, ತ್ವರಿತ ನ್ಯಾಯಾಲಯ-XIV, ಸಿಸಿಸಿ, ಬೆಂಗಳೂರು ನಗರ, ಇವರು ದಿನಾಂಕ 15.2.2012 ರ ತಮ್ಮ ತೀರ್ಪಿನ ಮೂಲಕ ಸ್ಥಿರೀಕರಿಸಿದ್ದ ತೀರ್ಪನ್ನು ಸಿರೀಕರಿಸಲಾಗಿದೆ.

ಆದಾಗ್ಯೂ, ಆಪಾದಿತರಾದ-ಶ್ರೀಮತಿ ಸುಷ್ಮಾ ರಾಣಿಯವರು ಒಂದು ತಿಂಗಳ ಸಾದಾ ಸೆರೆವಾಸ ಅನುಭವಿಸಬೇಕೆಂದು ಆದೇಶಿಸಿ VI ನೇ ಹೆಚ್ಚುವರಿ ಮುಖ್ಯ ಮಹಾನಗರ ದಂಡಾಧಿಕಾರಿ, ಬೆಂಗಳೂರು, ಇವರು ಆದೇಶಿಸಿದ್ದ ಹಾಗೂ ಹೆಚ್ಚುವರಿ ಸತ್ರ ನ್ಯಾಯಾಧೀಶರು, ತ್ವರಿತ ನ್ಯಾಯಾಲಯ-XIV, ಸಿಸಿಸಿ, ಬೆಂಗಳೂರು ನಗರ, ಇವರು ಸ್ಥಿರೀಕರಿಸಿದ್ದ ಒಂದು ತಿಂಗಳ ಸಾದಾ ಸೆರೆವಾಸದ ಶಿಕ್ಷೆಯನ್ನು ರದ್ದುಪಡಿಸಲಾಗಿದೆ.

ಆದರೆ, ಅಧಿವಿಚಾರಣಾ ನ್ಯಾಯಾಲಯದಿಂದ ವಿಧಿಸಲಾದ ಹಾಗೂ ಸತ್ರ ನ್ಯಾಯಾಧೀಶರ ನ್ಯಾಯಾಲಯದಿಂದ ಸ್ಥಿರೀಕರಿಸಲಾದ 5,000/-ರೂಪಾಯಿಗಳ ದಂಡ ಮೊತ್ತವನ್ನು ಮಾರ್ಪಡಿಸಿ, ಈ ದಿನದಿಂದ ಅರವತ್ತು ದಿನಗಳೊಳಗಾಗಿ ದಂಡ ಮೊತ್ತವನ್ನು ಸಂದಾಯ ಮಾಡಲು ತಪ್ಪಿದ್ದಲ್ಲಿ ಒಂದು ತಿಂಗಳ ಸಾದಾ ಸೆರೆವಾಸ ಅನುಭವಿಸಬೇಕೆಂದು ತಪ್ಪಿತ ಶಿಕ್ಷೆಯೊಂದಿಗೆ ದಂಡದ ಮೊತ್ತವನ್ನು 15,000/-ರೂಪಾಯಿಗಳಿಗೆ ಹೆಚ್ಚಿಸಲಾಗಿದೆ.

[ii] ಅಪರಾಧ ಪುನರೀಕ್ಷಣಾ ಅರ್ಜಿಸಂಖ್ಯೆ: 1358/2010 ನ್ನು ವಜಾ ಮಾಡಲಾಗಿದೆ.

ಅಪರಾಧ ಪುನರೀಕ್ಷಣಾ ಅರ್ಜಿಸಂಖ್ಯೆ: 152/2014 ರಲ್ಲಿ ಪ್ರತಿವಾದಿ ಪರವಾಗಿ ನ್ಯಾಯಾಲಯದ ಸಲಹೆಗಾರರಾಗಿ (ಅಮಿಕಸ್ ಕ್ಯೂರಿ) ಸೇವೆ ಸಲ್ಲಿಸಿದ ಶ್ರೀಮತಿ ಪಿ.ಎ. ಕಲ್ಪನರವರ ಸೇವೆಯನ್ನು ಈ ನ್ಯಾಯಾಲಯವು ಶ್ಲಾಘಿಸುತ್ತದೆ.ಈ ಮೊಕದ್ದಮೆಯಲ್ಲಿ ಅವರು ಸಲ್ಲಿಸಿದ ಸೇವೆಯನ್ನು ಪ್ರಶಂಸಿಸುತ್ತಾ ಅವರಿಗೆ 5,000/-ರೂಪಾಯಿಗಳಿಗೆ ಕಡಿಮೆ ಇಲ್ಲದಂತೆ ಗೌರವಧನ ನೀಡಲು ಶಿಫಾರಸು ಮಾಡಲಾಗಿದೆ.

ರಿಜಿಸ್ಟ್ರಿಯವರು, ಅಧಿವಿಚಾರಣಾ ನ್ಯಾಯಾಲಯ ಹಾಗೂ ಸತ್ರ ನ್ಯಾಯಾಲಯದ ದಾಖಲೆಗಳೊಂದಿಗೆ ಈ ಆದೇಶದ ಪ್ರತಿಯನ್ನು ಸಂಬಂಧಿಸಿದ ನ್ಯಾಯಾಲಯಗಳಿಗೆ ವಿಳಂಬ ಮಾಡದೆ ಕಳುಹಿಸಬೇಕು.

ಆಪಾದಿತರು ಕೂಡಲೇ ಈ ಆದೇಶದ ಉಚಿತ ಪ್ರತಿ ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.